11

# ಸೈತಾನನು ನಿಮಗೆ ಕಠಿಣವಾದ ಸಮಯವನ್ನು ಎದುರುಮಾಡಿದಾಗ

# (4:1-7)

ಸೈತಾನನು ಇನ್ನೂ ಜೀವಿಸುತ್ತಾ ಇದ್ದಾನೆ ಮತ್ತು ಈ ಗ್ರಹವಾದ ಪೃಥ್ವಿಯ[1] ಮೇಲೆ ಆತನು ಚೆನ್ನಾಗಿ ಜೀವಿಸುತ್ತಾ ಇದ್ದಾನೆ. "ನಿಮ್ಮ ವಿರೋಧಿಯಾಗಿರುವ ಸೈತಾನನು ಗರ್ಜಿಸುವ ಸಿಂಹದೋಪಾದಿಯಲ್ಲಿ ಯಾರನ್ನು ನುಂಗಲಿ ಎಂದು ಹುಡುಕುತ್ತಾ ತಿರುಗುತ್ತಿದ್ದಾನೆ" (1 ಪೇತ್ರ 5:8).

ಸೈತಾನನ ವಿವರಣಾತ್ಮಕ ವಿವರಣೆಯು ಮತ್ತು ಆತನ ಉದ್ದೇಶವು ಪ್ರಕಟನೆ 12ರಲ್ಲಿ ಕಂಡುಬಂದಿದೆ. ಈ ಅಧ್ಯಾಯವು ಗರ್ಭಿಣಿ ಸ್ತ್ರೀ ಮತ್ತು ಕೆಂಪಾದ ಮಹಾಘಟಸರ್ಪದೊಂದಿಗೆ ಪ್ರಾರಂಭವಾಗುತ್ತದೆ. ಘಟಸರ್ಪವು ಸ್ತ್ರೀಯ ಮಗುವು ಹುಟ್ಟಿದ ತಕ್ಷಣ ಆತನನ್ನು ನುಂಗಿಬಿಡಬೇಕೆಂದು ಕಾದು ಕೂತುಕೊಂಡಿತ್ತು. ಘಟ ಸರ್ಪವು ವಚನ 9ರಲ್ಲಿ ಸೈತಾನ ಎಂದು ಗುರುತಿಸಲ್ಪಟ್ಟಿದೆ. ಆ ಮಗುವು ಕ್ರಿಸ್ತನಾಗಿದ್ದಾನೆ.[2] ಇನ್ನೊಂದು ಮಾತಿನಲ್ಲಿ, ಯೇಸುವನ್ನು ಆತನ ಹುಟ್ಟಿದ ಸಮಯದಲ್ಲಿ ನಾಶಮಾಡುವದು ಸೈತಾನನ ಉದ್ದೇಶವಾಗಿತ್ತು. ಹೆರೋದನು ಮಕ್ಕಳನ್ನು ಕೊಲ್ಲಿಸುವುದರಿಂದ ಹಿಡಿದು ಶಿಲುಬೆಯ ತನಕ ಸೈತಾನನ ಕ್ರೂರ ಕೃತ್ಯಗಳ ವಿವರಣೆಯು ಸುವಾರ್ತೆಗಳಿಂದ ತಿಳಿಯುತ್ತೇವೆ. ಹೇಗೋ ಸೈತಾನನು ಯೇಸುವನ್ನು ನಾಶಮಾಡುವಲ್ಲಿ ವಿಫಲನಾದನು. ಪ್ರಕಟನೆ 12:5 ಸೂಚಿಸುವುದೇನೆಂದರೆ "ಮಗುವು ದೇವರ ಬಳಿಗೂ ಆತನ ಸಿಂಹಾಸನದ ಬಳಿಗೂ ಎತ್ತಲ್ಪಟ್ಟಿತು" ಇದು ಯೇಸುವಿನ ದಿವಾರೋಹಣವನ್ನು ಸೂಚಿಸುವುದಾಗಿದೆ. ಘಟಸರ್ಪವು ಮಗುವನ್ನು ಹಿಂಬಾಲಿಸಲು ಯತ್ನಿಸಿತು. ಆದರೆ ಅವನು ಭೂಮಿಗೆ ದೊಬ್ಬಲ್ಪಟ್ಟನು. ಆಗ ಆತನು ತನ್ನ ಕೋಪವನ್ನು ಆ ಸ್ತ್ರೀಯ ಮೇಲೆ ಹಾಕಲು ಪ್ರಯತ್ನಿಸಿದನು. ಆದರೆ ದೇವರು ಆಕೆಯನ್ನು ರಕ್ಷಿಸಿದನು. ಹೀಗೆ "ಘಟಸರ್ಪವು ಸ್ತ್ರೀಯ ಮೇಲೆ ಕೋಪಿಸಿಕೊಂಡು ಆಕೆಯ ಸಂತಾನದವರ ಮೇಲೆ ಅಂದರೆ ದೇವರ ಆಜ್ಞೆಗಳನ್ನು ಕೈಕೊಂಡು ನಡೆದು ಯೇಸುವಿನ ವಿಷಯವಾಗಿ ಸಾಕ್ಷಿ ಹೇಳಿರುವವರ ಮೇಲೆ ಯುದ್ಧ ಮಾಡುವುದಕ್ಕೆ ಹೊರಟನು" (ಪ್ರಕಟನೆ 12:17). "ದೇವರ ಆಜ್ಞೆಗಳನ್ನು ಯಾರು ಕೈಕೊಳ್ಳುತ್ತಾರೋ ಮತ್ತು ಯೇಸುವಿನ ವಿಷಯವಾಗಿ ಯಾರು ಸಾಕ್ಷಿಕೊಡುವವರಾಗಿರುತ್ತಾರೋ" ಅಂಥವರು *ಕ್ರೈಸ್ತರಾಗಿತ್ತಾರೆ*. ಇಲ್ಲಿಯವರೆ ಸೈತಾನನಿಗೆ ಯೇಸುವನ್ನು ನಾಶಮಾಡಲು ಸಾಧ್ಯವಾಗದೇ ಇದ್ದಾಗ, ಆತನು ಈಗ *ನನ್ನನ್ನು ಮತ್ತು ನಿನ್ನನ್ನು* ನಾಶಮಾಡುವುದಕ್ಕಿಂತ ಹೆಚ್ಚೇನೂ ಬಯಸುವುದಿಲ್ಲ.

ಈ ಪಾಠವು, ಸಭೆಯನ್ನು[3] ನಾಶಮಾಡುವ ಸೈತಾನನ ಮೊದಲ ಪ್ರಯತ್ನದ ಕುರಿತು ತಿಳಿಸುತ್ತದೆ. ಆದಿ ಸಭೆಯು ಶಾಂತತೆಯಿಂದಲೂ ಮತ್ತು ಸಮಾಧಾನದಿಂದಲೂ ಇತ್ತು, ಆದರೆ ಇದು "ಬಿರುಗಾಳಿ ಏಳುವ ಮುಂಚಿನ ಶಾಂತತೆ" ಅಗಿತ್ತು ಸೈತಾನನು ದೇವರ ಮಕ್ಕಳನ್ನು ಬಹುಕಾಲದವರೆಗೆ ಶಾಂತವಾಗಿ ಇರಲು ಬಿಡುವುದಿಲ್ಲ.

ನಮ್ಮ ಹಿಂದಿನ ಪಾಠದಲ್ಲಿ ಅಪೊಸ್ತಲರ ಕೃತ್ಯಗಳು 3ರ ಮೇಲಿನ ಅಧ್ಯಾಯವನ್ನು ಸಂಪೂರ್ಣಗೊಳಿಸಿದ್ದೇವೆ. ಪೇತ್ರ ಮತ್ತು ಯೋಹಾನರು ದೇವಾಲಯದಲ್ಲಿ ಒಬ್ಬ ಹುಟ್ಟುಕುಂಟನನ್ನು ಸ್ವಸ್ಥಮಾಡಿದರು. ಭಾವುಕರಾದ ಜನಜಂಗುಳಿಯು ಅಲ್ಲಿ ಕೂಡಿಕೊಂಡಾಗ

ಪೇತ್ರನು ಅವರಿಗೆ ಸುವಾರ್ತೆಯನ್ನು ಬೋಧಿಸಿದನು. ಒಮ್ಮಲೇ, ಆತನ ಪ್ರಸಂಗವು ತಡೆಹಿಡಿಯಲ್ಪಟ್ಟಿತು, ಮತ್ತು ಕ್ರೈಸ್ತನ ಮೊದಲ ಹಿಂಸೆಯು ಆರಂಭವಾಯಿತು, ಈ ಪಾಠದಲ್ಲಿ ಮತ್ತು ನಂತರದ ಎರಡರಲ್ಲಿ, ಈ ಅಪೊಸ್ತಲರು ಹೇಗೆ ಪ್ರತಿಕ್ರಿಯಿಸಿದರು ಎಂಬುದನ್ನು ನೋಡುತ್ತೇವೆ, "ಹೀಗೆ ಸೈತಾನನು ನಮಗೆ ಕಠಿಣವಾದ ಸಮಯವನ್ನು ಎದುರುಮಾಡಿದಾಗ" *ನಾವು* ಹೇಗೆ ಪ್ರತಿಕ್ರಯಿಸಬೇಕೆಂಬುದನ್ನೂ ನಾವು ಇಲ್ಲಿ ನೋಡುತ್ತೇವೆ.

## ಆಶ್ಚರ್ಯಗೊಳ್ಳದಿರು (4:1-3)

ಪೌಲನು ಹೇಳಿದ್ದೇನೆಂದರೆ "ಕ್ರಿಸ್ತನಲ್ಲಿ ಸದ್ಭಕ್ತರಾಗಿ ಜೀವಿಸುವದಕ್ಕೆ ಮನಸ್ಸು *ಮಾಡುವವರೆಲ್ಲರೂ* ಹಿಂಸೆಗೊಳಗಾಗುತ್ತಾರೆ." (2 ತಿಮೊಥೆ 3:12; ಒತ್ತಿ ಹೇಳಿದ್ದು ನನ್ನದು.) ಪೇತ್ರನು ,"... ಪುಟಕ್ಕೆ ಹಾಕಲ್ಪಟ್ಟದ್ದಕ್ಕೆ ಆಶ್ಚರ್ಯಪಡಬೇಡಿರಿ. ವಿಪರೀತವಾದ ಸಂಗತಿ ಸಂಭವಿಸಿತೆಂದು ಆಶ್ಚರ್ಯಪಡಬೇಡಿರಿ" (1 ಪೇತ್ರ 4:12) ಎಂದು ಹೇಳಿದನು. ಹಿಂಸೆಯು ಬಂದಾಗ ನಾವು ಆಶ್ಚರ್ಯಪಡಬಾರದು.

ಯೇಸು ತನ್ನ ಶಿಷ್ಯರಿಗೆ "... ಅವರು ನಿಮ್ಮನ್ನು ಹಿಡಿದು ಸಭಾಮಂದಿರಗಳ ಮತ್ತು ಸೆರೆ ಮನೆಯ ಅಧಿಕಾರಸ್ಥರ ವಶಕ್ಕೆ ಕೊಟ್ಟು ನನ್ನ ನಿಮಿತ್ತವಾಗಿ ... ಹಿಂಸೆಪಡಿಸುವರು ... ಮತ್ತು ನಿಮ್ಮಲ್ಲಿ ಕೆಲವರನ್ನು ಕೊಲ್ಲಿಸುವರು. ಇದಲ್ಲದೆ ನನ್ನ ಹೆಸರಿನ[4] ನಿಮಿತ್ತ ನಿಮ್ಮನ್ನು ಎಲ್ಲರೂ ಹಗೆ ಮಾಡುವರು" (ಲೂಕ 21:12, 17).[5] ಎಂದು ಎಚ್ಚರಿಸಿದನು. ಹಿಂಸೆಯು ಬರುತ್ತದೋ ಇಲ್ಲವೋ; ಎಂಬ ಪ್ರಶ್ನೆ ಇಲ್ಲಿಲ್ಲ, ಆದರೆ *ಯಾವಾಗ* ಬರುತ್ತದೆ ಎಂಬುದು ಪ್ರಶ್ನೆಯಾಗಿದೆ. ಈ ಪ್ರಶ್ನೆಗೆ ಪೇತ್ರ ಮತ್ತು ಯೋಹಾನರು ಮಧ್ಯಪ್ರವೇಶಿಸಿ ಉತ್ತರಿಸಿದರು:

> ಅಪೊಸ್ತಲರು ಜನರಿಗೆ ಉಪದೇಶ ಮಾಡುತ್ತಾ ಸತ್ತವರು ಇದ್ದದ್ದಕ್ಕೆ ಜೀವಿತ ರಾಗಿ ಏಳುವರು ಎಂಬುದನ್ನು ಯೇಸುವಿನ ದೃಷ್ಟಾಂತದಿಂದ ಸಾರುತ್ತಾ ಇದ್ದದ್ದಕ್ಕೆ ಯಾಜಕರೂ ದೇವಾ ಲಯದ ಅಧಿಪತಿಯೂ ಸದ್ದುಕಾಯರೂ ಅಸಮಾಧಾನಪಟ್ಟು ಅಪೊಸ್ತಲರು ಜನರ ಸಂಗಡ ಮಾತನಾಡುತ್ತಿರುವಾಗಲೇ ಬಂದು ಅವರನ್ನು ಹಿಡಿದು ಆಗಲೇ ಸಯಂಕಾಲವಾಗಿದ್ದದರಿಂದ ಮರುದಿನದವರೆಗೆ ಕಾವಲಲ್ಲಿಟ್ಟರು (ವಚನಗಳು 1-3).

ಅಪೊಸ್ತಲರನ್ನು ಹಿಡಿದವರು ಯೆರೂಸಲೇಮಿನ ಧಾರ್ಮಿಕ ರಾಜಕೀಯ ಮತ್ತು ಸಾಮಾಜಿಕ ನಾಯಕರುಗಳು ಆಗಿದ್ದರು. ಇವರು ಪಟ್ಟಣದ ಅಧಿಕಾರವನ್ನು ಪ್ರತಿನಿಧಿಸುವಂತವರಾಗಿದ್ದರು!

"ಯಾಜಕರು" ಬಹುಶಃ "*ಮಹಾ* ಯಾಜಕರಾಗಿದ್ದರು" (ವಚನ 23; ಒತ್ತಿ ಹೇಳಿದ್ದು ನನ್ನದು),[6] "ಅವರೆಲ್ಲರೂ ಯಾಜಕರು *ಮಹಾ*ಯಾಜಕರ ವಂಶಸ್ಥರಾಗಿದ್ದು," (ವಚನ 6), ಅದರೊಡನೆ ಈ ಯಾಜಕರು ದೇವಾಲಯದ ಚಟುವಟಿಕೆಗಳಿಗೆ[7] ಜವಾಬ್ದಾರರಾಗಿದ್ದರು. "ದೇವಾಲಯ ಕಾಯುವವರ ಅಧಿಪತಿಯು (ಕಪ್ತಾನರು)" ದೇವಾಲಯದ[8] ಸುರಕ್ಷತೆಯ ಜವಾ ಬ್ದಾರನಾಗಿರುತ್ತಿದ್ದನು ಆತನು ಮಹಾಯಾಜಕನಿಗಿಂತ ಎರಡನೆಯ ದರ್ಜೆಯವನಾಗಿದ್ದನು. "ಸದ್ದುಕಾಯರು" ಶಕ್ತಿಯುತವಾದ ಚಿಕ್ಕ ಗುಂಪಾಗಿದ್ದು ದೇವಾಲಯವನ್ನು ಮತ್ತು ಪ್ಯಾಲಿಸ್ತೇ ನನ್ನು ನಿಯಂತ್ರಿಸುವವರಾಗಿದ್ದರು.[9] ಮಹಾಯಾಜಕನೂ ಸದ್ದುಕಾಯನಾಗಿದ್ದವನೂ ಸನ್ಹೆ ದ್ರೀನಿನಲ್ಲಿರುವ ಅನೇಕರು ಸದ್ದುಕಾಯರ ಗುಂಪಿಗೆ ಸೇರಿದವರಾಗಿದ್ದರು (5:17). ರೋಮ ಸರಕಾರದ ಜೊತೆ ಸಹಕಾರಕ್ಕೆ ಒಪ್ಪಿಗೆ ಇರುವುದರಿಂದ ಸದ್ದುಕಾಯರು ಸಮರ್ಥ ರಾಜ ಕೀಯ ಬಣವಾಗಿ ರಾಷ್ಟ್ರದಲ್ಲಿ ಹೊರಹೊಮ್ಮಿದರು. ಸೈತಾನನು ಸಭೆ ಮೇಲೆ ತನ್ನ ಹಿಂಸೆಯನ್ನು ಆರಂಭಿಸುವಾಗ ಆತನು ತಕ್ಷಣವೇ "ತನ್ನ ಮೊದಲ ಬಣವನ್ನು ಕಳುಹಿಸಿದನು."

ಹಿಂಸೆಯು "ಪಟ್ಟಣದ ಒಳ್ಳೆಯ ಜನರಿಂದ," ಒಳ್ಳೆಯ ನಾಯಕರುಗಳಿಂದ, ಸಭೆಯ

ಸದಸ್ಯರಿಂದಲೂ ಕೂಡ ಬರಬಹುದು (2 ಕೊರಿಂಥ 11:26)! ಸೈತಾನನು ಯಾರನ್ನಾದರೂ ಬಳಸಬಹುದು ಮತ್ತು ಬಳಸುತ್ತಾನೆ (ನೋಡಿರಿ ಮತ್ತಾಯ 16:23).

ಹಿಂಸೆಯ ಕಾರಣಗಳು ನಮ್ಮನ್ನು ಆಶ್ಚರ್ಯಕ್ಕೀಡು ಮಾಡಬಾರದು. ಪೇತ್ರ ಯೋಹಾನರು ದೇವರ ಅಥವಾ ಮನುಷ್ಯರ ಯಾವ ನಿಯಮವನ್ನು ಮುರಿದರು? ಯಾವುದೂ ಇಲ್ಲ. ಕೇವಲ ಒಬ್ಬ ಮನುಷ್ಯನನ್ನು ವಾಸಿಮಾಡಿದರು ಮತ್ತು ಪ್ರಸಂಗವನ್ನು ಪ್ರಬೋಧಿಸಿದರು. ಹೇಗೋ ಆ ದಿನಗಳಲ್ಲಿರುವ ಅಧಿಕಾರ ವರ್ಗಕ್ಕೆ ಬೆದರಿಕೆಯೊನ್ನೊಡ್ಡಿದರು.[10] ಅಪೊಸ್ತಲರ ಸೇವೆಯ ಮೂರು ಅಂಶಗಳು ಅಧಿಕಾರ ವರ್ಗವನ್ನು ತಲ್ಲಣಗೊಳಿಸಿದವು:

(1) ಪೇತ್ರ ಮತ್ತು ಯೋಹಾನರು "ಜನರಿಗೆ ಬೋಧಿಸುತ್ತಿದ್ದರು" ವಾಸ್ತವವಾಗಿ ಪೇತ್ರ ಮತ್ತು ಯೋಹಾನರು ಬೋಧಿಸುವ *ನಿಜಾಂಶವನ್ನು* ಅವರು ಮೆಚ್ಚುತ್ತಿರಲಿಲ್ಲ; ಆ ಅವಕಾಶವನ್ನು ಅವರು ತಮಗಾಗಿ ಇಟ್ಟುಕೊಳ್ಳಲು ಬಯಸುವವರಾಗಿದ್ದರು. ಅವರಲ್ಲಿ ಹೆಚ್ಚಿನವರು ಪೇತ್ರ ಮತ್ತು ಯೋಹಾನರು ಬೋಧಿಸುವ ವಿಷಯವನ್ನು ಮೆಚ್ಚುವವರಾಗಿರಲಿಲ್ಲ; ಇನ್ನೊಂದು ಸಂಗತಿಯೆಂದರೆ ಅವರು ಮೆಸ್ಸೀಯನನ್ನು ಮರಣಕ್ಕೆ ಒಪ್ಪಿಸಿದರು ಎಂದು ಅಪೊಸ್ತಲರು ಅವರನ್ನು ಆಪಾದಿಸಿದರು (3:14, 15)!

(2) ಪೇತ್ರ ಮತ್ತು ಯೋಹಾನರು "ಯೇಸುವನ್ನು ಕುರಿತು ಸಾರುವವರಾಗಿದ್ದರು ..." ರೋಮನ್ನರು ಯೇಸುವನ್ನು ಶಿಲುಬೆಯ ಮೇಲೆ ಮೊಳೆಗೆ ಜಡಿದಾಗ ಯೆಹೂದಿ ನಾಯಕರುಗಳು ತಾವು ತೊಂದರೆಯಿಂದ ಪಾರದೆವು ಎಂದು ನೆನಿಸಿದ್ದರು. ಆದರೆ ಯೇಸು ಜೀವಿಸಿದ್ದಕ್ಕಿಂತ ಹೆಚ್ಚಾಗಿ ಈಗಲೇ ಅನೇಕ ಶಿಷ್ಯರನ್ನು ಹೊಂದಿದ್ದನು.

(3) ಪೇತ್ರ ಮತ್ತು ಯೋಹಾನರು "ಯೇಸು ಸತ್ತವರೊಳಗಿಂಥ ಎದ್ದನು ಎಂದು ಘೋಷಿಸುವವರಾಗಿದ್ದರು." ಯೇಸು ಸತ್ತವರೊಳಗಿಂದ ಎಬ್ಬಿಸಲ್ಪಟ್ಟನು ಎಂಬುದು ಮಾತ್ರವಲ್ಲ ಯೇಸುವಿನ ಮೂಲಕ ಸತ್ತವರನ್ನೂ[11] ಕೂಡ ಎಬ್ಬಿಸುವದನ್ನು ಅವರು ಘೋಶಿಸುವವರಾಗಿದ್ದರು! ಈ ಕೆಲ ಸಂಗತಿಗಳು ಸದ್ದುಕಾಯರನ್ನು ಹೆಚ್ಚಾಗಿ[12] ಗಲಿಬಿಲಿಗೊಳಗೆ ಮಾಡಿದವು. ಅವರು ಪುನುರುತ್ಥಾನವನ್ನು ನಂಬುವವರಾಗಿರಲಿಲ್ಲ. ಅವರಿಗೆ ಅದ್ವಿತೀಯ ಶಕ್ತಿಗಳಲ್ಲಿ ನಂಬಿಕೆಯೂ ಇರಲಿಲ್ಲ. (ಅವರು ನಾವು ಚರ್ಚಿಸುತ್ತಿರುವ ಸೈತಾನನನ್ನು ನಿಶ್ಚಯವಾಗಿಯೂ ನಂಬುವವ ರಾಗಿರಲಿಲ್ಲ!) ಬಹುಶಃ ಪೇತ್ರ ಮತ್ತು ಯೋಹಾನರು ನಿಯಮವನ್ನು ಮುರಿಯಲಿಲ್ಲ ಆದರೆ ಯಥಾಸ್ಥಿತಿಯನ್ನು ಗಲಿಬಿಲಿಗೊಳಿಸಿದರು - ಮತ್ತು ಅದು ಭಯಂಕರವಾಗಿತ್ತು!

ಕೆಲ ಸಾರಿ ಕ್ರೈಸ್ತರಾದ ನಾವು ಒಳ್ಳೆಯದನ್ನು ಮಾಡುವಾಗ ಸೈತಾನನು ಕಠಿಣ ಸಮಯವನ್ನು ಎದುರುಮಾಡಿದಾಗ ನಾವು ಆಶ್ಚಯಪಡುತ್ತೇವೆ: "ನಾವು ಯಾರನ್ನು ನೋಯಿ ಸಲಾರೆವು!" ಎಂದು ನಾವು ವಿರೋಧಿಸುವವರಾಗಿರುತ್ತೇವೆ. "ಯೇಸು *ಕ್ರಿಸ್ತನಲ್ಲಿ* ಸದ್ಭಕ್ತರಾಗಿ ಜೀವಿಸುವುದಕ್ಕೆ ಮನಸ್ಸುಮಾಡುವವರು ಹಿಂಸೆಗೊಳಗಾಗುತ್ತಾರೆ" (2 ತಿಮೊಥೆ 3:12; ಒತ್ತಿ ಹೇಳಿದ್ದು ನನ್ನದು). "ಯೇಸು ಒಳ್ಳೆಯದನ್ನು ಮಾಡುವುದಕ್ಕಾಗಿ ಸಂಚರಿಸಿದನು" (10:38), ಮತ್ತು ಆತನು ಕ್ರೂಜಿಸಲ್ಪಟ್ಟನು.

ಮತ್ತೆ ಕೆಲವರು, ದೇವರ ವಾಕ್ಯವನ್ನು ಕೇಳುವವರು ಮತ್ತು ನಂಬುವವರು[13] ಅಪಹಾಸ್ಯ ಒಳಗಾದಾಗ ಆಶ್ಚರ್ಯಪಡುತ್ತಾರೆ. ಇದಕ್ಕಾಗಿ ಸಂಶಯಪಡಬೇಡ; ನೀವು ಸರಿಯಾಗಿ ಜೀವಿ ಸುತ್ತಿರುವಾಗ ಮತ್ತು ದೇವರ ವಾಕ್ಯವನ್ನು ಬೋಧಿಸುವಾಗ, ಇಲ್ಲಿ ಸೈತಾನನು ನಿಲ್ಲಲಾರನು! ಆತನು ಸಹಜವಾಗಿಯೇ ಹೇಗೋ ನಮ್ಮ ಸಾಕ್ಷಿಯನ್ನು ಅಳಿಸಿಹಾಕಲು ಪ್ರಯತ್ನವನ್ನು ನಡೆಸುತ್ತಾನೆ. ಇದನ್ನು ಗಮನಿಸು!

ಯೆಹೂದಿ ನಾಯಕರುಗಳು ಪೇತ್ರ ಮತ್ತು ಯೋಹಾನರನ್ನು ಬಂಧಿಸಿದಾಗ, ಅವರನ್ನು ಸೆರೆಯಲ್ಲಿಟ್ಟರು.[14] ಅವರು "ಆಗಲೇ ಸಂಜೆಯಾದ್ದರಿಂದ[15] ಮರುದಿನದವರೆಗೆ ಅವರನ್ನು ಸೆರೆಯಲ್ಲಿಟ್ಟರು." ಬಹುಶಃ ಅವರು ಮರುದಿನದವರೆಗೆ ಕೆಲ ಕಾನೂನಿನ ಅಂಶಗಳು[16] ಪರಿಪೂರ್ಣವಾಗುವ ತನಕ ಅವರು ಕಾಯಬೇಕಿತ್ತು. ಬಹುಶಃ ಅವರು ಈ ಪ್ರಕರಣವನ್ನು

ಹೇಗೆ ಕೈಗೆತ್ತಿಕೊಳ್ಳಬೇಕು ಎಂದು ನಿರ್ಧರಿಸಲು ಅವರಿಗೆ ಸಮಯವೂ ಬೇಕಾಗಿರಬಹುದು (ಅದಲ್ಲದೆ ಅಪೊಸ್ತಲರು ಕೆಟ್ಟದ್ದನ್ನೇನೂ ಮಾಡದೇ ಇದ್ದಾಗಲೂ ಕೂಡಾ). ಅಥವಾ ಅವರು ಪೇತ್ರ ಯೋಹಾನರನ್ನು ಒಂದು ರಾತ್ರಿ ಸೆರೆಯಲ್ಲಿಟ್ಟು ತಮ್ಮ ಅಧಿಕಾರದ ಗತ್ತನ್ನು, ಅದರ ರುಚಿಯನ್ನೂ ಅವರಿಗೆ ತೋರಿಸಲು ಬಯಸಿದ್ದರು. ಪೇತ್ರ ಯೋಹಾನರನ್ನು ಬಂಧಿಸಲು ಅವರಿಗೆ ಸೆರೆಯಾಗಿಸುವುದನ್ನು ಬಿಟ್ಟರೆ ಬೇರೆ ಯಾವುದೆ ಆದ ಕಾನೂನುಬದ್ಧ ನೆಲೆಗಳು ಅವರಿಗಿರಲಿಲ್ಲ (ನೋಡಿರಿ ವಚನ 21), ಆದರೆ ಯಾರು ಯೇಸುವನ್ನು ಮರಣಕ್ಕೆ ಒಪ್ಪಿಸಿದರೋ ಅಂತವರಿಗೆ ಯಾವುದೇ ತರದ "ನಿಯಮಾವಳಿಯ" ಬಗೆಗೆ ಚಿಂತೆಯು ಇರಲಿಲ್ಲ.

## ನಿನ್ನ ಕೈಗಳನ್ನು (ಅಸಹಾಯಕತೆಯಿಂದ) ಚಾಡಿಸಬೇಡ[17] (4:4-6)

ಸೈತಾನು ನಿನಗೆ ಕಠಿಣವಾದ ಸಮಯವನ್ನು ಕೊಡಲು ಪ್ರಾರಂಭಿಸಿದರೆ, ಕೆಲವರು ಬಲು ನಿರಾಶೆಗೊಳಗಾಗುತ್ತಾರೆ: "ನಾವು ಇಲ್ಲಿಂದ ನಿರ್ಗಮಿಸುವದು ಒಳ್ಳೆಯದು! ಯಾವುದೂ ಸರಿಹೊಂದುವುದಿಲ್ಲೆ!" ಎಂದುಕೊಳ್ಳುತ್ತಾರೆ ಸೈತಾನನು ನಮ್ಮ ಜೀವನವನ್ನು ಕಠಿಣ ವಾಗಿ ಮಾಡಬಹುದು ಯಾಕೆಂದರೆ: ನಾವು ಹಾಗೇ ಮುಂದುವರೆದಿದ್ದಾದರೆ, ದೇವರ ನಿಮಿತ್ತ ನಮಗೆ ಘನ ಕಾರ್ಯಗಳು ಘಟಿಸಬಹುದು, ಎಂದು ಆತನು ತಿಳಿದಿದ್ದಾನೆ, ಎಂಬುದನ್ನು ನೀವು ಗಣನೆಗೆ ತಂದುಕೊಳ್ಳಿರಿ! ಒಂದು ವೇಳೆ ನಾನು ಬೋಧಿಸುವಾಗ ಬಂಧಿಸಲ್ಪಟ್ಟಿದ್ದರೆ, ಮತ್ತು ಸೆರೆಮನೆಯಲ್ಲಿ ಒಂದು ರಾತ್ರಿಯನ್ನು ಕಳೆದಿದ್ದಾದರೆ ಸೌವಾರ್ತಿಕ ಜೀವನ ವ್ಯರ್ಥವೆಂದು ಪರಿಗಣಿಸಿದ್ದರೆ. ಪೇತ್ರನ ಸಂದೇಶದಿಂದ ಹೇಗೆ ಫಲಿತಾಂಶ ಬಂದಿತ್ತೆಂಬುದನ್ನು ಗಮನಿಸಿ: "ಅವರ ವಾಕ್ಯವನ್ನು ಕೇಳಿದವರಲ್ಲಿ ಅನೇಕರು ನಂಬಿದರು, ಗಂಡಸರ ಸಂಖ್ಯೆಯು ಸುಮಾರು ಐದು ಸಾವಿರತನಕ ಬೆಳೆಯಿತು" (ವಚನ 4). ಈ ಜನರು ಪೇತ್ರ ಮತ್ತು ಯೋಹಾನರು ಸೆರೆಹಿಡಿಯಲ್ಪಟ್ಟಿದ್ದನ್ನು ನೋಡಿದ್ದರು, ಆದರೆ ಇದು, ಅವರನ್ನು ಕ್ರೈಸ್ತರಾ ಗುವದರಿಂದ ಹಿಂಜರಿಯುವಂತೆ ಮಾಡಲಿಲ್ಲ! ಸಂದೇಶವಾಹಕರನ್ನು ಸೆರೆಯಲ್ಲಿ ಹಾಕಲ್ಪಟ್ಟರು ಆದರೆ ಸಂದೇಶವನಲ್ಲ. ದೇವರು ವಾಕ್ಯವನ್ನು ಪ್ರಾಮಾಣಿಕ ಹೃದಯದಿಂದ ಪಡೆದಿದ್ದಾದರೆ ಅದು ಶಕ್ತಿಶಾಲಿಯಾದದ್ದು ಆಗಿದೆ (ಲೂಕ 8:15; ರೋಮಾಪುರ 1:16).

ವಚನ 4ರಲ್ಲಿ "ನಂಬಿದರು" ಎಂಬ ಪದವು ಈ ಮನುಷ್ಯರು ಯೇಸುವನ್ನು ಮೆಸ್ಸೀಯನು ಎಂದು ನಂಬುವ ಹಂತಕ್ಕೆ ಅವರು ಬಂದು ಮುಟ್ಟಿದ್ದಾರೆ ಎಂದು ಅರ್ಥಮಾಡಿಕೊಳ್ಳುವುದಲ್ಲ. "ನಂಬಿಕೆ" ಇದು ವ್ಯಾಪಕಾರ್ಥದಲ್ಲಿ "ವಿಶ್ವಾಸ ಮತ್ತು ವಿಧೇಯತೆ"[18] ಎಂದು ಬಳಸಲ್ಪಡುತ್ತದೆ. ಕೇವಲ ಕೆಲ ನಂಬಿಗಸ್ತರ ವಿವರಣೆಗಳು ಅಪೊಸ್ತಲರ ಪುಸ್ತಕದಲ್ಲಿ ಕೊಡಲ್ಪಟ್ಟಿವೆ.[19] ಉಳಿದ ಭಾಗಗಳಲ್ಲಿ ಸರಳವಾದ ಸಮೀಕ್ಷೆಯ ವಿವರಣೆಯು ಸಾಮಾನ್ಯ ವಾಗಿ ಕೊಡಲ್ಪಟ್ಟಿದ್ದು ಅದು "ವಿಶ್ವಾಸಿಗಳು ... ಮಂಡಲಿಯೊಳಗೆ ಸೇರಿಕೊಳ್ಳುತ್ತಿದ್ದರು" (5:14) ಅಥವಾ "ಅನೇಕರು ... ನಂಬಿಕೆಯೆಡೆಗೆ ವಿಧೇಯತೆಯಿಂದ ಬಂದರು (6:7) ಎಂದಾಗಿದೆ. ದೇವರು ಪಕ್ಷಪಾತಿಯಲ್ಲವಾದ್ದರಿಂದ" (10:34), ಪಂಚಾಶತ್ತಮ ದಿನದಂದು ಮೂರುಸಾವಿರ ಜನರು ಪಶ್ಚಾತ್ತಾಪಪಟ್ಟು ದೀಕ್ಷಾಸ್ನಾನ ಹೊಂದಿದಂತೆ, ವಚನ 4ರಲ್ಲಿ ಸೂಚಿತವಾದ ಜನರೂ ಕೂಡ ಹಾಗೇ ಮಾಡಿದರು ಎಂಬುದರಲ್ಲಿ ಯಾವ ಸಂಶಯವೂ ಇಲ್ಲ. ಇಂಗ್ಲೆಂಡಿನ ಒಂದು ಸಭೆಯ ಪಠ್ಯಪುಸ್ತಕಗಳ ಟಿಪ್ಪಣೆಗಳ ಪ್ರಕಾರ: "ಅದರೊಡನೆ ಹೆಚ್ಚೂ ಕಡಿಮೆ ಐದುಸಾವಿರ ಜನ ಯೆಹೂದಿಗಳು ಸ್ವಸ್ಥತೆಯ ಅದ್ಭುತಗಳನ್ನು ಕಂಡು ಅಥವಾ ಕೇಳಿದ ಅವರು ಪೇತ್ರನ ಆಹ್ವಾನವನ್ನು ಸ್ವೀಕರಿಸಿದರು ಮತ್ತು ಸಭೆಯಲ್ಲಿ[20] ದೀಕ್ಷಾಸ್ನಾನ ಮಾಡಿಸಿಕೊಂಡರು." ಒಂದು ವೇಳೆ ಪೇತ್ರನು ಅಪೊಸ್ತಲರ ಕೃತ್ಯಗಳು 3ರ[21] ತನ್ನ ಪ್ರಸಂಗದಲ್ಲಿ ದೀಕ್ಷಾಸ್ನಾನದ ಬಗೆಗೆ ಪ್ರಸ್ತಾಪಿಸದೇ ಹೋಗಿದ್ದರೆ, ಅವರಿಗೆ ದೀಕ್ಷಾಸ್ನಾನದ ಬಗೆಗೆ ಹೇಗೆ ತಿಳಿಯುತ್ತಿತ್ತು? ಜನರು ದಿನಾಲು ದೀಕ್ಷಾಸ್ನಾನ ಹೊಂದುತ್ತಿದ್ದರು (2:41, 47)! ಕ್ರೈಸ್ತರ ಗುಂಪು ದೀಕ್ಷಾಸ್ನಾನಕ್ಕೆ ಸಾಕ್ಷಿಯಾಗುವ ದೃಷ್ಯವು ಯೆರೂಸಲೇಮಿನಲ್ಲಿ ಸರ್ವೇ ಸಾಮಾನ್ಯವಾದ

ಸಂಗತಿಯಾಗಿತ್ತು! ಕ್ರೈಸ್ತರಾಗಬೇಕೆಂದು ನಿರ್ಧರಿಸಿದ ಯಾರೇ ಆಗಲಿ ಅದರ ಪ್ರಕ್ರಿಯೆಯನ್ನು ತಿಳಿಯಬಹುದಿತ್ತು.

ವಚನ 4ರಲ್ಲಿ ಭಾಷಾಂತರವಾದ "ಮನುಷ್ಯರು" ಎಂಬ ಪದವು, ಸ್ತ್ರೀ ಮತ್ತು ಪುರುಷರನ್ನು[22] ಒಳಗೊಂಡ ಮಾನವಶಾಸ್ತ್ರದ ಹ್ಯಾಂತ್ರೋಪ್‌ಸ್, *anthropos* ಜಾತಿವಾಚಕ ಪದವಲ್ಲ. ಬದಲಾಗಿ, ಇದು ನಿರ್ದಿಷ್ಟ ಪದವಾದ *aner* ಎಂಬ ಪದದಿಂದ ಬಂದಿದ್ದು, ಇದರ ಅರ್ಥವು ಪುರುಷ ಮತ್ತು ಸ್ತ್ರೀಗೆ ವ್ಯತ್ಯಾಸಿಸಿದೆ. "ಸುಮಾರು ಐದು ಸಾವಿರ" ಎಂಬ ಪದವು ಸಂಪೂರ್ಣವಾಗಿ ಪುರುಷರನ್ನು ಸೂಚಿಸುವುದಾಗಿದ್ದು ಅಲ್ಲಿ ಎಷ್ಟು ಜನ ಸದ್ಯಸರು[23] ಕೂಡಿದ್ದರು. ಎಂಬುದನ್ನು ನಾವು ಕೇವಲ ಊಹೆ ಮಾಡಬೇಕು. ಅಲ್ಲಿ ಕಡಿಮೆ ಎಂದರು ಹತ್ತುಸಾವಿರ ಜನರು ಇರಲೇಬೇಕು![24] ಉರಿಯುತ್ತಿರುವ ಎಣ್ಣೆಗೆ ಅದರ ಮೇಲೆ ನೀರನ್ನು ಹಾಕಿದಾಗ ಬೆಂಕಿಯು ಹರಡುತ್ತದೆ; ಅದರಂತೆಯೇ ಸಭೆಯನ್ನು ನಾಶಮಾಡುವ ಸೈತಾನನ ಪ್ರತಿಯೊಂದು ಪ್ರಯತ್ನಗಳ ಪರಿಣಾಮವಾಗಿ ಸಭೆಯು ಎಲ್ಲೆಡೆ ಹರಡುತ್ತಾ ಹೋಯಿತು!

ಹೇಗೋ, ಬಂಧಿಸುವದು ಮತ್ತು ಸೆರೆಯಲ್ಲಿ ಒಂದು ರಾತ್ರಿ ಇಡುವದು ಕೇವಲ ಅಪೊಸ್ತಲರ ಸಾಕ್ಷಿಯ ಕಾರ್ಯವನ್ನು ನಿರ್ನಾಮ ಮಾಡುವ ಸೈತಾನನ ಕಾರ್ಯದ ಮೊದಲ ಹಂತವಾಗಿತ್ತು. ಮರುದಿನ ಮುಂಜಾನೆ, ದೊಡ್ಡ ಗುಂಪೊಂದು ಸೇರಿಬಂದು ಅಪೊಸ್ತಲರ ವಿರುದ್ಧ ಕಾರ್ಯಾಚಾರಣೆ ಕೈಕೊಂಡಿತು:

> ಮರುದಿನ ಯೆಹೂದ್ಯರ ಅಧಿಕಾರಿಗಳೂ ಹಿರಿಯರೂ, ಶಾಸ್ತ್ರಿಗಳೂ ಯೆರೂಸಲೇಮಿನಲ್ಲಿ ಕೂಡಿಬಂದರು. ಅನ್ನನೆಂಬ ಮಹಾಯಾಜಕನೂ ಕಾಯಫನೂ ಯೋಹಾನನೂ ಅಲೆಕ್ಸಾಂದ್ರನೂ ಮಹಾಯಾಜಕನ ಸಂಬಂಧಿಗಳೆಲ್ಲರೂ ಇದ್ದರು (ವಚನಗಳು 5, 6).

"ಅಧಿಕಾರಿಗಳು" "ಮಹಾಯಾಜಕರಾಗಿದ್ದರು" (ವಚನ 23). "ಹಿರಿಯರು" ನಾಯಕರಾಗಿದ್ದರು, ಜ್ಞಾನ ಮತ್ತು ಪ್ರಬುದ್ಧತೆ ಗೌರವವನ್ನು ಹೊಂದಿದ್ದ ವಯಸ್ಕರು ಆಗಿದ್ದರು. ಶಾಸ್ತ್ರಿಗಳು ನಿಯಮಗಳನ್ನು ಮಾಡುವಲ್ಲಿ ನಿಷ್ಣಾತರಾಗಿದ್ದರು.[25] ಈ ಮೂವರ ಗುಂಪನ್ನು ಕೂಡಿಸಿಕೊಂಡು ಆಳುವ ಸಭೆಯು "ಸನ್ಹೆದ್ರೀನ್" ಎಂದು ಕರೆಯಲ್ಪಡುತ್ತಿತ್ತು.[26] ಸನ್ಹೆದ್ರೀನ್ ಇದು ಯೆಹೂದಿಗಳ ಶಾಸನ ಸಭೆಯಾಗಿತ್ತು (5:21) ಮತ್ತು ಉಚ್ಚನ್ಯಾಯಾಲಯವೂ ಆಗಿತ್ತು.[27] ಆ ಮುಂಜಾನೆ ಪ್ಯಾಲಿಸ್ತೇನಿನ ಬಲು ಖ್ಯಾತಿವೆತ್ತ ಈ ಜನರು ಗುಂಪು ಕೂಡಿ ವಿಷೇಶವಾದ ಅಧಿವೇಶನದಲ್ಲಿ ಗಲಿಲಾಯದ ಈ ಇಬ್ಬರು ಮೀನುಗಾರರೊಂದಿಗೆ ಏನು ಮಾಡಬೇಕೆಂದು ನಿರ್ಧರಿಸಲು ಕೂಡಿಬಂದರು!

ಆ ಸ್ಥಿತಿಯ ಗಂಭೀರತೆಯು ಅಲ್ಲಿದ್ದ ಜನರ ಪಟ್ಟಿಯಿಂದ ಎದ್ದು ಕಾಣುತ್ತಿತ್ತು. "ಮಹಾಯಾಜಕನಾದ ಅನ್ನನು" ಅಲ್ಲಿದ್ದನು. "ಮಹಾಯಾಜಕ" ಇದೊಂದು ಗೌರವಯುತವಾದ ಬಿರುದಾಗಿತ್ತು.[28] ಅನ್ನನು ಮಾಜಿ ಮಹಾಯಾಜಕನಾಗಿದ್ದನು. ಅನೇಕ ವರ್ಷಗಳವರೆಗೆ ಮಹಾಯಾಜಕ ಎಂದು ಸೇವೆ ಸಲ್ಲಿಸದ ನಂತರ, ಆತನು ರೋಮನ್ನರಿಂದ ಪದಚ್ಯತಗೊಂಡಿದ್ದನು. ಅನೇಕ ಯೆಹೂದ್ಯರು ಆತನನ್ನು ಇನ್ನೂ ಮಹಾಯಾಜಕ ಎಂದೇ ಮಾನ್ಯಮಾಡುತ್ತಿದ್ದರು, ಹೇಗೋ, ಆತನು ಅಧಿಕಾರದ ಹಿಂದಿನ ಶಕ್ತಿಯಾಗಿದ್ದನು[29] ಕಾಯಫನು ಅನ್ನನ ಅಳಿಯನೂ ಸಧ್ಯದ ಮಹಾಯಾಜಕನೂ ಆಗಿದ್ದನು (ಮತ್ತಾಯ 26:57; ಯೋಹಾನ 18:13, 24). ಯೋಹಾನ ಮತ್ತು ಅಲೆಕ್ಸಾಂಧ್ರರು ಯಾರಾಗಿದ್ದರು ಎಂಬುದು ನಮಗೆ ಖಚಿತವಾಗಿ ತಿಳಿದಿಲ್ಲ, ಆದರೆ ಅವರು ನಿಶ್ಚಿತವಾಗಿ ಪ್ರಭಾವಿ ವ್ಯಕ್ತಿಗಳಾಗಿದ್ದು ಲೂಕನ ಪರಿಚಿತ ಓದುಗರಿರಬಹುದು. ಅವರು ಅನ್ನ ಅಥವಾ ಕಾಯಫರ ಮಕ್ಕಳೂ ಆಗಿರಬಹುದು. ಮತ್ತು ಈಗ ಮಹಾಯಾಜಕರ[30] ಸಾಲಿನಲ್ಲಿ ಇರುವವರೂ ಆಗಿರಬಹುದು. ಯಾವುದೇ ರೀತಿಯಲ್ಲಿದ್ದರೂ ಅವರು ಮಹಾಯಾಜಕರ ವಂಶಸ್ತರಾಗಿದ್ದರು, *ಅವರೆಲ್ಲರೂ* ಮಹಾಯಾಜಕರ

ವಂಶದಲ್ಲಿ[31] ಇದ್ದುದ್ದನ್ನು ಲೂಕನು ಗಮನಿಸಿದ್ದಾನೆ ಅಲ್ಲಿದ್ದ ಪ್ರತಿಯೊಬ್ಬರು ಯೆರೂಸಲೇಮಿನಲ್ಲಿ ಇದ್ದ ಪ್ರಮುಖ ಜನರೇ ಆಗಿದ್ದರು!

ಒಂದು ವೇಳೆ ನಾನು ಪೇತ್ರ ಅಥವಾ ಯೋಹಾನ ಆಗಿದ್ದರೆ ದೇಶದ ಅತಿ ಶಕ್ತಿಯುಳ್ಳ ವ್ಯಕ್ತಿಯ ಮುಂದೆ ಕರೆಯಲ್ಪಟ್ಟಿದ್ದೇ ಆದರೆ, ನಾನು ಈ ಸನ್ನಿವೇಶವನ್ನು *ದಬ್ಬಾಳಿಕೆಯ* ಸನ್ನಿವೇಶ ಎಂಬಂತೆ ನೋಡುತ್ತಿದ್ದೆನು. ಆದರೆ ಪೇತ್ರ ಯೋಹಾನರಾದರೋ ಇದನ್ನು ಒಂದು ಅವಕಾಶದಂತೆ ನೋಡಿದರು. ಯೇಸು ತನ್ನ ಶಿಷ್ಯರಿಗೆ ಹಿಂಸೆಯ ಬರುತ್ತದೆಂದು ಎಚ್ಚರಿಸುತ್ತ "ನಿಮ್ಮ ಮೇಲೆ ಕೈಮಾಡುವರು, ಅವರು ನಿಮ್ಮನ್ನು ಹಿಂಸೆಗೆ ಗುರಿಪಡಿಸುವರು, ಸಭಾಮಂದಿರದಿಂದ ನಿಮ್ಮನ್ನು ಓಡಿಸುವರು. ನನ್ನ ಹೆಸರಿನ ನಿಮಿತ್ತವಾಗಿ ನಿಮ್ಮನ್ನು ಅರಸುಗಳ ಮುಂದೆ ಮತ್ತು ಅಧಿಕಾರಿಗಳ ಮುಂದೆಯೂ ತರುವರು *ಇದು ನಿಮ್ಮ ಸಾಕ್ಷಿಯ ಸುಸಂದರ್ಭಕ್ಕೆ ನಡೆಸುವುದಾಗಿದೆ*' (ಲೂಕ 21:12, 13; ಒತ್ತಿ ಹೇಳಿದ್ದು ನನ್ನದು) ಈ ರೀತಿ ಯಲ್ಲಿ ಹೇಳಿದನು. ಪೇತ್ರ ಮತ್ತು ಯೋಹಾನರು ಸನ್ಹೆದ್ರೇನಿನಲ್ಲಿ ಬೋಧಿಸಲು ಇದಕ್ಕಿಂತ ಒಳ್ಳೆಯ ಅವಕಾಶವು ಅವರಿಗೆ ದೊರಕಿತೇ? ಅವರಿಗೆ ಅವಕಾಶ ಸಿಕ್ಕುವ ಒಂದೇ ಮಾರ್ಗ ಎಂದರೆ ಅವರು ಸರಪಣಿಗಳಲ್ಲಿ ಬಂಧಿತರಾಗಿ ಹೋದಾಗ ಮಾತ್ರ!

ಅಪೊಸ್ತಲರ ಕೃತ್ಯಗಳ ಪುಸ್ತಕದ ಮೂಲಕ ನಾವು ಸಾಗುವಾಗ, ಪ್ರತಿ ಸಮಯದಲ್ಲೂ ಒಬ್ಬ ಕ್ರೈಸ್ತನು ನ್ಯಾಯಾಲಯದಲ್ಲಿ ನಿಂತಾಗ ಆತನು ಆ ಸಮಯದ ಲಾಭ ಪಡೆಯುವುದನ್ನು ನೋಡುತ್ತೇವೆ. ಆ ಸಂದರ್ಭವನ್ನು ಆತನು ತನ್ನ ಸಮರ್ಥನೆಗೆ ಬಳಸಿಕೊಳ್ಳದೇ ಯೇಸುವಿನ ಬಗೆಗೆ ಘೋಷಿಸುವ ಸಂದರ್ಭವನ್ನಾಗಿ ಬಳಸಿಕೊಂಡಿದ್ದಾನೆ!

ಸೈತಾನನು ನಮಗೆ ಕಠಿಣ ಸಮಯವನ್ನು ಕೊಟ್ಟಾಗ ನಾವು ಕಣ್ಣುಗಳನ್ನು ತೆರೆದುಕೊಂಡು ಇದ್ದುದ್ದಾದರೆ, ನಾವು ಹಿಂದೆಂದೂ ಹೊಂದದ ಅವಕಾಶಗಳನ್ನು ಹೊಂದಬಹುದಾಗಿದೆ - ನಾವು ನಮ್ಮ ಕೈಗಳನ್ನು ಅಸಹಾಯಕತೆಯಿಂದ ಕೈಚೆಲ್ಲಬಾರದು ಮತ್ತು ಅದರಿಂದ ಸನ್ನಿವೇಶ ದಿಂದ ನಿರ್ಗಮಿಸಬಾರದು!

## ಸೈತಾನನ ನಿಯಮಗಳೊಂದಿಗೆ ಆಟವಾಡಬೇಡಿರಿ (4:7, 8)

ವಚನ 5 ಹೇಳುವುದೇನಂದರೆ "ಮರುದಿನ" ಮಂಡಲಿಯ ಸದಸ್ಯರೆಲ್ಲರು ಯೆರೂಸಲೇ ಮಿನಲ್ಲಿ ಕೂಡಿಬಂದರು. ಅವರು ಅಪೊಸ್ತಲರನ್ನು ನಡುವೆ ನಿಲ್ಲಿಸಿ "ನೀವು ಎಂಥಾ ಶಕ್ತಿಯಿಂದ ಇಲ್ಲವೇ ಯಾವ ಹೆಸರಿನಿಂದ ಇದನ್ನು ಮಾಡಿದಿರಿ?" (ವಚನ 7) ಎಂದು ಕೇಳತೊಡಗಿದರು. ನೀವು ಅಪೊಸ್ತಲರಲ್ಲಿ ಒಬ್ಬರು ಎಂದು ಊಹಿಸಿಕೊಳ್ಳಿರಿ. ನಿಮ್ಮ ಸುತ್ತಲೂ ಅರೆಚಕ್ರಾಕಾರ ವಾಗಿ ಎಂಬ್ಬತ್ತೊಂದು ನ್ಯಾಯಾಧೀಶರು[32] ಮಸುಕಾದ ನಿಲುವಂಗಿಯನ್ನು ಧರಿಸಿದ್ದಾರೆ ಮತ್ತು ವಿರೋಧ ಭಾವನೆಯ ಮುಖವನ್ನು ವ್ಯಕ್ತಪಡಿಸುವಂತೆ ಕೂತಿದ್ದಾರೆ. ಅದಕ್ಕೂ ಮಿಗಿಲಾಗಿ, ಅಲ್ಲಿದ್ದ ಇತರರೂ ಇದಕ್ಕೆ ಸಮಾನವಾಗಿ ವೈಶಮ್ಯಪೂರಿತರಾಗಿ[33] ಇದ್ದಾರೆ. ನಿಮ್ಮ ಇಬ್ಬದಿಯಲ್ಲೂ ಸಭೆಯ ಅಧಿಕಾರಿಗಳಿದ್ದಾರೆ, ಮಧ್ಯದಲ್ಲಿ, ಈ ಎಲ್ಲ ಬದ್ಧ ವೈರತ್ವವು ಈ ಮೂವರು ಮನುಷ್ಯರ ಮೇಲೆ ಕೇಂದ್ರೀಕೃತವಾಗಿತ್ತು. ಅಂದರೆ ನೀವು ಇತರ ಅಪೊಸ್ತಲರು ಮತ್ತು ವಾಸಿಯಾದ ಮನುಷ್ಯನು.[34] ನೀವು ಒಂದು ಸ್ನೇಹಪರ ಮುಖಕ್ಕಾಗಿ ಹುಡುಕಾಡುವಿರಿ, ಕೇವಲ ಒಂದಾದರೂ. ಹುಡುಕಿ ಇಲ್ಲವೇ ಇಲ್ಲ, ಯಾರೂ ಸಿಕ್ಕಲಾರರು. ಆಗ ನೀವು ನೆನಪಿಸಿಕೊಳ್ಳುವಿರಿ, ಯೇಸು ಕ್ರಿಸ್ತನನ್ನು ಮರಣಕ್ಕೆ ಒಪ್ಪಿಸಿದ್ದೂ ಇದೇ ಗುಂಪಲ್ಲವೇ! ಎಂದು ಇಂತಹ ಪರಿಸ್ಥಿತಿಯು ಅಪೊಸ್ತಲರಾಧ್ಯಂತ ಎಲ್ಲರಲ್ಲಿಯೂ ಭಯಹುಟ್ಟಿಸಿತ್ತು. ನಾನೂ ನಿಶ್ಚಿತವಾಗಿ ಭಯಗ್ರಸ್ತನಾಗಿಬಿಟ್ಟೆನು!

ಸಾಮಾನ್ಯ ಅವಧಿಯು ಪ್ರಾರಂಭವಾದಂತೆ, ಮುಂಚೆ ನಡೆದ ಸಂಗತಿಯು ತಿರುಗಿ ಸಂಭವಿಸಿತೇ ಎಂದು ಅನ್ನಿಸುತ್ತದೆ. ಪದ್ಧತಿಯಂತೆ ಅಪಾದನಾ ಪಟ್ಟಿಯು ಓದುವುದರ ಮೂಲಕ ಸಾಮಾನ್ಯವಾಗಿ ನ್ಯಾಯವಿಚಾರಣೆಯು ಆರಂಭವಾಗುತ್ತಿತ್ತು. ಬದಲಾಗಿ ಅದು ಅನಿಶ್ಚಿತವಾದ

ಪ್ರಶ್ನೆಯೊಂದಿಗೆ ಪ್ರಾರಂಭವಾಯಿತು: "ಅವರು ನೀವು ಎಂಥಾ ಶಕ್ತಿಯಿಂದ ಇಲ್ಲವೇ ಯಾವ ಹೆಸರಿನಿಂದ ಇದೆಲ್ಲವನ್ನೂ ಮಾಡಿದಿರಿ"[35] ಎಂದು ವಿಚಾರಣೆಯು ಪ್ರಾರಂಭಮಾಡಿದರು. "ಇದು" ಎಂಬುದು ಏನನ್ನು ಸೂಚಿಸುವುದ್ದಾಗಿದೆ: ಸ್ವಸ್ಥತೆಯನ್ನೋ, ಬೋಧನೆಯನ್ನೋ, ಅಥವಾ ಬೇರೆ ಏನನ್ನೋ? ಘನ ತೀರ್ಪುಗಾರರಿಗೆ ಅಪೊಸ್ತಲರನ್ನು ಹಿಡಿದಿಟ್ಟುಕೊಳ್ಳಬಹುದಾದ ಯಾವುದೇ ಕಾರಣವೂ ಕಾಣಲಿಲ್ಲ (ವಚನ 21), ಪೇತ್ರ ಮತ್ತು ಯೋಹಾನರು ತಾವು ತಪ್ಪಿಸಿಕೊಳ್ಳಲು ಆಗದಂತಹ ಯಾವುದೇ ಉತ್ತರವನ್ನು *ಕೊಡಬಹುದು,* ಅದರ ಮೂಲಕ ಅವರನ್ನು ಶಿಕ್ಷಿಸುವ ಕಾರಣವನ್ನು ತೆಗೆಯಬಹುದು ಎಂದು ಅವರು ಆಶಿಸುವವರಾಗಿದ್ದರು. ಇಂಥ ರೀತಿಯನ್ನು ನಾವು ಮುಂಚೆ ಎಲ್ಲಿ ಎದುರಿಸಿದ್ದೇವೆ? "ಕ್ರಿಸ್ತನ ನ್ಯಾಯವಿಚಾರಣೆಯಲ್ಲಿ!" (ಲೂಕ 22:66-71). ಪೇತ್ರ ಮತ್ತು ಯೋಹಾನರು "ನ್ಯಾಯವಿಚಾರಣೆಯಲ್ಲಿಯೂ" ಅದೇ ಮುಖಗಳು ನಮಗಿವೆ. ಅದೆ ಪೂರ್ವಾಗ್ರಹಪೀಡಿತ ಯೋಚನೆ, ಅದೇ ಕಪಟತೆ, ಅದೇ ತರದ ಪ್ರಶ್ನೆಯ ಸಾಲುಗಳು! ಅಪೊಸ್ತಲರ ಪ್ರಭಾವವನ್ನು ಹತ್ತಿಕ್ಕಲು ಯಾವುದಾದರೊಂದು ಎಳೆ ಸಿಕ್ಕೀತೆಂದು ಯೆಹೂದಿ ನಾಯಕರು ಹುಡುಕಾಡತೊಡಗಿದರು![36]

ಪ್ರಶ್ನೆಯ ಅನಿಶ್ಚಿತವಾದಾಗ್ಯೂ ಇದು ಮೂರು ಸಮರ್ಥ ತಂತ್ರಗಳಿಂದ ಕೂಡಿತ್ತು. ಅವರು ಮೊದಲು "ಯಾವ ಶಕ್ತಿಯಿಂದ ... ಇದೆಲ್ಲವನ್ನೂ ಮಾಡಿದಿರಿ" ಎಂದು ಕೇಳಿದರು. "ಶಕ್ತಿ" ಇದು ಅದೇ ತರದ ಗ್ರಿಕ್ ಪದವಾದ: "ಅದ್ಭುತಗಳು"[37] ಎಂಬುದರಿಂದ ಭಾಷಾಂತರವಾಗಿದೆ, ಇದು ಅದ್ಭುತೀಯ ಶಕ್ತಿ ಎಂದು ಭಾಷಾಂತರವಾಗಬಹುದಾಗಿದೆ. ಮೋಶೆಯ ಧರ್ಮಶಾಸ್ತ್ರದ ಪ್ರಕಾರ, ಮಾಟವು ಪ್ರಮುಖವಾದ ಕಾನೂನುಬಾಹಿರವಾಗಿತ್ತು. ಒಂದು ವೇಳೆ ಅಪೊಸ್ತಲರು ತಾವು ಮಾಟವನ್ನು ಅಭ್ಯಾಸಮಾಡುತ್ತಿದ್ದೆವು ಎಂದೇನಾದರೂ ಸೂಚಿಸಿದ್ದಾದರೆ ಅವರನ್ನು ಮರಣಕ್ಕೆ ಒಪ್ಪಿಸಬಹುದಾಗಿತ್ತು.

ಮುಂದೆ, ಮಂಡಲಿಯು "ಯಾವ *ಹೆಸರಿನಿಂದ* ಇದನ್ನು ಮಾಡಿದಿರಿ?" ಎಂದು ಕೇಳಿತು? "ಹೆಸರು" ಇದು ಅದಿಕಾರ[38] ಎಂಬ ದೃಷ್ಟಿಯಲ್ಲಿ ಬಳಕೆಯಾಗಿದೆ. ಕೆಲದಿನಗಳ ಮುಂಚೆ ಯೇಸು ಕ್ರೂಜಿಸಲ್ಪಟ್ಟ ಸಮಯದಲ್ಲಿ ಇದೆ ಜನರು ಆತನೆಡೆಗೆ ಬಂದು "ನೀನು ಯಾವ ಅಧಿಕಾರದಿಂದ ಇದೆಲ್ಲವನ್ನೂ ಮಾಡುತ್ತೀ? ಈ ಅಧಿಕಾರವನ್ನು ನಿನಗೆ ಯಾರು ಕೊಟ್ಟರು? ಎಂದು ಕೇಳಿದರು" (ಮತ್ತಾಯ 21:23). ಈಗ ಅವರು ಅಪೊಸ್ತಲರಿಗೆ ಅದೆ ತರದ ಪ್ರಶ್ನೆಯನ್ನು ಕೇಳುತ್ತಿದ್ದಾರೆ. ಎರಡೂ ಪ್ರಕರಣಗಳಲ್ಲಿ ಅವರು ಹೀಗೆ ಸೂಚಿಸುತ್ತಿದ್ದರು: "ನಾವು ಅಧಿಕಾರಿಗಳಲ್ಲಿ ಒಬ್ಬರಾಗಿದ್ದೇವೆ ನಮಗೆ ಅಧಿಕಾರವಿದೆ! *ನಮ್ಮ* ಹಾಗೆ ಅಧಿಕಾರವಿದ್ದವರಂತೆ ವರ್ತಿಸಲು ನಿಮಗೆಷ್ಟು ಧೈರ್ಯ!" ಅಪೊಸ್ತಲರು ಕೆಲ ನ್ಯಾಯ ಬದ್ಧವಲ್ಲದ ಮೂಲಗಳನ್ನು ಬಳಸಿಕೊಳ್ಳಬಹುದು ಎಂದು ಅವರಿಗೆ ಅನುಮಾನವಿತ್ತು.

ಮೂರನೆಯ ಮೋಸವು ಬಲು ಸೂಕ್ಷ್ಮವಾದದ್ದು - ಮತ್ತು ಬಲು ಮಾರಣಾಂತಿಕವಾದದ್ದು. ಇದು ಇಂಗ್ಲೀಷ್ ಭಾಷಾಂತರದಲ್ಲಿ ಬಿಟ್ಟುಹೋಗಿರಬಹುದು. ಮೂಲಭಾಗದಲ್ಲಿನ *"ನೀನು"* ಎಂಬ ಪದವು ಒತ್ತುಕೊಡುವುದಕ್ಕಾಗಿ ವಾಕ್ಯದ ಕೊನೆಯಲ್ಲಿ ಇಡಲ್ಪಟ್ಟಿದೆ. ನೀವು ವಾಕ್ಯವನ್ನು ಓದುವಾಗ ನೀವು ಎಂಬ ಪದವನ್ನು ಒತ್ತಿ ಹೇಳಬೇಕು: "ಯಾವ ಶಕ್ತಿಯಿಂದ ಅಥವಾ ಯಾವ ಹೆಸರಿನಿಂದ ನೀವು ಇದನ್ನೆಲ್ಲ ಮಾಡಿದಿರಿ?" ಇನ್ನೊಂದು ಮಾತಿನಲ್ಲಿ "ನಮ್ಮ ಕಡೆಗೆ ನೋಡು ಮತ್ತು ನಿಮ್ಮನ್ನೂ ನೋಡಿಕೊಳ್ಳಿರಿ, ನೀವು ನಮ್ಮನ್ನು ನಮ್ಮ ಅಧಿಕಾರವನ್ನು ಸವಾಲು ಮಾಡಬಹುದು ಎಂದು ಎಣಿಸಿದ್ದೀರಾ?" ಎಂದು. ಅವರು ಅಪೊಸ್ತಲರನ್ನು "ಶಸ್ತ್ರಾಭ್ಯಾಸ ಮಾಡದ ಸಾಧಾರಣರು" ಎಂದುಕೊಂಡಿದ್ದರು (ವಚನ 13). ಅವರು ಪೇತ್ರ ಮತ್ತು ಯೋಹಾನರನ್ನು ಪ್ರಶ್ನಿಸುವಾಗ ಅಣಕದ ಧ್ವನಿಯೊಂದು ಅವರಲ್ಲಿತ್ತು. ಪ್ರಶ್ನೆಗಳೂ ಅವರು ಕೇಳಿದ ರೀತಿಯೂ ಅಪೊಸ್ತಲರಿಂದ ಸಿಟ್ಟನ್ನು ಪ್ರಚೋದಿಸುವಂತೆಯೂ ಇತ್ತು. ಆಡಳಿತಗಾರರು "ಮಾತಾಳಿಗೆ ಪಾಪ ತಪ್ಪದು. ಮೌನಿಯು ಮತಿವಂತ" (ಜ್ಞಾನೋಕ್ತಿ 10:19). ಎಂಬ ನಾಣ್ಣುಡಿಯನ್ನು ಅವರು ಪ್ರಯೋಗಿಸುತ್ತಿದ್ದರು.

ಸೈತಾನನು ನಿನಗೆ ಕಠಿಣ ಸಮಯವನ್ನು ಎದುರು ಮಾಡಿದಾಗ, ನೀನು ಆತನ ನಿಯಮಗಳ ಮೂಲಕ ಆಡಬೇಕೆಂದು ಆತನು ಬಯಸುವವನಾಗಿದ್ದಾನೆ. ಆ ದಿಶೆಯಲ್ಲಿ ಆತನು ನೀವು ಪ್ರತಿಕ್ರಿಯಿಸಬೇಕೆಂದು ಬಯಸುವವನಾಗಿದ್ದಾನೆ; ನೀನು ಕೆಟ್ಟದಕ್ಕೆ ಪ್ರತಿಯಾಗಿ ಕೆಟ್ಟದ್ದನ್ನು ಮಾಡಲು ಆತನು ಬಯಸುವವನಾಗಿದ್ದಾನೆ. ಒಂದು ವೇಳೆ ನೀನು ಆತನ ನಿಯಮಗಳ ಜೊತೆಯಲ್ಲಿ ಸಾಗಿದ್ದೇ ಆದರೆ ಆತನು ಈಗಾಗಲೇ ಈ ಸ್ಪರ್ದೆಯನ್ನು ಗೆದ್ದಂತೆ ಆಯಿತು ಎಂದು ಭಾವಿಸುತ್ತಾನೆ!

ಒಂದು ವೇಳೆ ನಾನು ಅಲ್ಲಿ ನಿಂತಿರುವುದಾಗಿದ್ದರೆ, ನನ್ನ ಭಾವನೆಗಳು ಘಾಸಿಯಾಗುತ್ತಿದ್ದವು ಮತ್ತು ನುಚ್ಚುಚೂರಾಗುತ್ತಿದ್ದವು. ಬಹುಶಃ ನಾನು ನ್ಯಾಯಸಭೆಯ ಕೈಯಲ್ಲಿ ಕೈಗೊಂಬೆಯಾಗುತ್ತಿದ್ದೆನು ಮತ್ತು ಸಿಟ್ಟಿನ್ನು ಹರಿಬಿಡುತ್ತಿದ್ದೆನು. ಗಮನಿಸಿ, ಪೇತ್ರನು ಹೇಗೆ ಪ್ರತಿಕ್ರಯಿಸಿದನೆಂದರೆ: "ಪೇತ್ರನು ... ಅವರಿಗೆ ... ಜನರ ಅಧಿಕಾರಿಗಳೇ ಹಿರಿಯರೇ[39] ... ಎಂದು ಸಂಬೋಧಿಸಿದನು (ವಚನ 8). "ಜನರ ಅಧಿಕಾರಿಗಳೇ ಹಿರಿಯರೇ" ಸಭಾಂಗಣದಲ್ಲಿರುವವರಿಗೆ ಗೌರವಯುತವಾಗಿ ಸಂಬೋಧಿಸಿದ ಸಂಬೋಧನೆಯಾಗಿತ್ತು. ಒಬ್ಬ ಲೇಖಕನು ಈ ವಾಕ್ಯವನ್ನು ಹೀಗೆ ಸಾರಾಂಶಿಸಿದ್ದಾನೆ "ನಮ್ಮ ರಾಷ್ಟ್ರದ ಗೌರವಯುತವಾದ ನಾಯಕರುಗಳೇ ಮತ್ತು ಹಿರಿಯರೇ,"[39] ಎಂದು ಪೇತ್ರನು ತನ್ನ ರಕ್ಷಣೆಗೆ ಪ್ರತಿಪಾದಿಸುತ್ತಿದ್ದಾಗ, ಆತನು ನಮ್ರವಾಗಿಯೇ ಇದ್ದನು! ಆತ್ಮದ ಕತ್ತಿಯು ಉಪ್ಪಿನ ಕಲ್ಮಶದಲ್ಲಿ ಆಳವಾಗಿ ಹೋಗುತ್ತದೆ.[40] ನೀವು ಎಲ್ಲ ಜನರಿಗೂ ಸಭ್ಯರಾಗಿರಬೇಕು, ಆದರೆ ಅವರು ಏನು ಮಾಡುತ್ತಾರೆ ಎಂಬುದಕ್ಕಲ್ಲ. *ಅವರು* ಏನಾಗಿರಬೇಕು ಎಂಬುದಕ್ಕೂ ಅಲ್ಲ, ಆದರೆ ನಾವು ಏನಾಗಿರಬೇಕು ಎಂಬುದಕ್ಕಾಗಿ!

ಮುಂದಿನ ದಿನಗಳಲ್ಲಿ ಸೈತಾನನು ನಿಮಗೆ ಕಷ್ಟಕರ ದಿನಗಳನ್ನು ಎದುರುಮಾಡಿದಾಗ ನೀವು ಬಹುಶಃ ಶೋಧನೆಗೊಳಗಾಗುತ್ತೀರಿ, ದಬ್ಬಾಳಿಕೆ ನಡಿಸುವವರನ್ನು ದ್ವೇಷದಿಂದ ನೋಡುತ್ತೇವೆ. ಹೇಗೋ, ಯೇಸು ಇನ್ನೊಂದು ಕೆನ್ನೆಯನ್ನು ಒಡ್ಡು ಎಂದು ಹೇಳಿದ್ದಾನೆ (ಮತ್ತಾಯ 5:39). ಸೈತಾನನು ತನ್ನ ನಿಯಮದಂತೆ ಆಡಿಸುವ ತಂತ್ರಕ್ಕೆ ಎಂದಿಗೂ ಒಳಗಾಗದಿರು!

## ಮುಕ್ತಾಯ

ಮುಂದಿನ ಪಾಠದಲ್ಲಿ, "ಸೈತಾನನು ಕಠಿಣ ಸಮಯವನ್ನು ಎದುರುಮಾಡಿದಾಗ ಎಂಬ ಅಭ್ಯಾಸವನ್ನು ಮುಂದುವರೆಸೋಣ." ಕೆಲಕ್ಷಣದಲ್ಲಿ, ಹೇಗೋ, ನಮ್ಮಲ್ಲಿ ಪ್ರತಿಯೊಬ್ಬರೂ ಸ್ವಪರೀಕ್ಷೆಗೆ ನಿಲ್ಲೋಣ: "ಸೈತಾನನು ನಮಗೆ ಇಂಥ ಕಠಿಣ ಸಮಯವನ್ನು ಎದುರು ಮಾಡಿದಾಗ ನಾನು ಹೇಗೆ ಪ್ರತಿಕ್ರಯಿಸಿದ್ದೇನೆ? ಹೇಗೆ ವರ್ತಿಸಿದ್ದೇನೆ? ನಾನು ಕ್ರಿಸ್ತನಂತೆ ವರ್ತಿಸಿದ್ದೇನೋ? ಅಥವಾ ಸೈತಾನನಂತೆ ವರ್ತಿಸಿದ್ದೇನೋ?" ನಿಮ್ಮ ಉತ್ತರಗಳು ಏನೇ ಇರಲಿ *ಮುಂದಿನ* ದಿನಗಳಲ್ಲಿ ಸೈತಾನನು ನಿಮ್ಮನ್ನು ಕೆಣಕಿದಾಗ ದೇವರ ಸಹಾಯದಿಂದ ನೀನು ಯಾವ ರೀತಿಯಲ್ಲಿ ವರ್ತಿಸಬೇಕೋ ಆ ರೀತಿಯಲ್ಲಿ ವರ್ತಿಸು.

## ಪ್ರಸಂಗದ ಟಿಪ್ಪಣಿ

ರಿಚರ್ಡ್ಸ್ ರೋಗರ್ಸ್ 4:1-31 ಮೇಲೆ "ಮೊದಲ ವಿರೋಧ"[41] ಎಂಬ ಶೀರ್ಷಿಕೆಯಡಿಯಲ್ಲಿ ಒಂದು ಪ್ರಸಂಗವು ಇದೆ. ಇದು ನಾಲ್ಕು ಮುಖ್ಯ ಅಂಶಗಳನ್ನು ಹೊಂದಿದ್ದು ಅವು ವಿರೋಧವು ತೋರ್ಪಡಿಸಲ್ಪಡುವದು (4:1-7), ವಿರೋಧವು ಸಂಧಿಸಿದ್ದು (4:8-12), ವಿರೋಧಿ ಹೊಂದಿಕೆಯಾಗಿದ್ದು (4:13-22), ವಿರೋಧವು ಕಡಿಮೆಮಾಡಲ್ಪಟ್ಟದ್ದು (4:23-31).

ಟಿಪ್ಪಣಿಗಳು

[1]ಆತನು ಯೇಸುವಿನ ಶಿಲುಬೆಯ ಮರಣದವರೆಗೆ ಮಾತ್ರ ಇರುತ್ತಾನೆ (ಪ್ರಕಟನೆ 12:11). ಹೊಸ ಒಡಂಬಡಿಕೆಯ ಸಮಯದಲ್ಲಿ ಇದ್ದ ಹಾಗೆ ಸೈತಾನನಾಗಲೀ ಅಥವಾ ಆತನ ದೆವ್ವಗಳಾಗಲಿ ಜನರ ಚಿತ್ತಕ್ಕೆ ವಿರುದ್ಧವಾಗಿ ಅವರನ್ನು ಆಕ್ರಮಿಸಲಾರವು ಅಂದರೆ ಇದರರ್ಥ ಆತನು ಕ್ರಿಯಾತ್ಮಕವಾಗಿಲ್ಲ ಅಥವಾ ಆತನಿಗೆ ಶಕ್ತಿಯಿಲ್ಲ ಎಂದಲ್ಲ. [2]ಇದನ್ನು ನಾವು ತಿಳಿದಿದ್ದೇವೆ ಕಾರಣ ಇದು ಮೆಸ್ಸೀಯನ ಕೀರ್ತನೆ ಆಗಿದೆ, ಕೀರ್ತನೆ 2, ಪ್ರಕಟನೆ 12:5ರಲ್ಲಿ ಆತನನ್ನು ವರ್ಣಿಸಲು ಬಳಸಲಾಗಿದೆ. [3]ಅಪೊಸ್ತಲರ ಕೃತ್ಯಗಳ ಪುಸ್ತಕದಲ್ಲಿನ ಸೈತಾನನ ಬಗೆಗಿರುವ ಇತರೆ ಆಧಾರಗಳಲ್ಲಿ ಕೆಲವುಗಳನ್ನು ನೋಡಿರಿ ಅಪೊಸ್ತಲರ ಕೃತ್ಯಗಳು 5:3; 13:10; 26:18. [4]ಯೇಸುವಿನ ಹೆಸರಿನ ಮೇಲೆ ಒತ್ತುಕೊಟ್ಟದ್ದನ್ನು ಗಮನಿಸಿ - ನಮ್ಮ ಹಿಂದಿನ ಪಾಠದಲ್ಲಿ ಒತ್ತು ಕೊಟ್ಟ ಹಾಗೆಯೇ ನಂತರದ ಪಾಠಕ್ಕೂ ಮುಂದುವರೆಯುತ್ತದೆ. [5]ಲೂಕ 21:12-17ರಲ್ಲಿನ ಎಲ್ಲ ಆಧಾರಗಳನ್ನು ನೋಡಿರಿ. ಮತ್ತಾಯ 10:17, 18; ಯೋಹಾನ 15:16-19:4 ಸಹ. [6]ಬ್ರೂಸ್ ತನ್ನ ಭಾಷ್ಯದ ಭಾಷಾಂತರದಲ್ಲಿ ನೀಡಿದಂತೆ 20ನೆಯ ಶತಮಾನದ ಹೊಸ ಒಡಂಬಡಿಕೆಯ ಆವೃತ್ತಿಯ ವಚನ 3ರಲ್ಲಿ ಪದಗುಚ್ಛವನ್ನು ನೀಡುತ್ತದೆ (F. F. Bruce, *The Book of Acts*, The New International Commentary on the New Testament, rev. ed. [Grand Rapids, Mich.: Wm. B. Eerdmans Publishing Co., 1989], 89). [7]ಹೊಸ ಒಡಂಬಡಿಕೆಯ ಕಾಲದಲ್ಲಿ ಯಾಜಕರು ಸಂಖ್ಯೆಯು ಹೆಚ್ಚಾಗಿದ್ದು, ಅವರೆಲ್ಲರೂ ಒಂದೇ ಸಾರಿ ಯಾಜಕತ್ವದ ಕಾರ್ಯವನ್ನು ಮಾಡುವ ಅವಕಾಶವು ಇರಲಿಲ್ಲ. ಅವರು ತಮ್ಮ ಕಾರ್ಯಕಾಲಪಗಳನ್ನು 24 ವಿಭಾಗಗಳಲ್ಲಿ ವಿಭಾಗಿಸಿಕೊಂಡಿದ್ದರು. ಪ್ರತಿಯೊಬ್ಬರೂ ವಾರದ ನಿರ್ಧಿಷ್ಟ ಸಮಯದಲ್ಲಿ ದೇವಾಲಯದಲ್ಲಿ ಸೇವೆ ಮಾಡಬಹುದಿತ್ತು (ಗಮನಿಸಿ 1:8) ಕೆಲಸ ಕಾರ್ಯಗಳು ನಿರಂತರವಾಗಿ ನಡೆಯುವಂತೆ ನೋಡಿಕೊಳ್ಳಲು ಕೆಲ ಯಾಜಕರು ದೇವಾಲಯದ ಮೇಲ್ವಿಚಾರಣೆಗೆಂದೇ ನೇಮಕಗೊಂಡಿದ್ದರು. ಈ ಯಾಜಕರು "ಸಾಮಾನ್ಯ ಯಾಜಕರಿಗಿಂತ" ಹೆಚ್ಚಿನ ಅಧಿಕಾರವನ್ನು ಹೊಂದಿದ್ದರು. ಆದ್ದರಿಂದಲೇ ಅವರು "ಮಹಾಯಾಜಕರು" ಎಂದು ಕರೆಯಲ್ಪಡುತ್ತಿದ್ದರು. ಇಂತಹ ನೇಮಕರಣಗಳಲ್ಲಿ ರಾಜಕೀಯವು ಪ್ರವೇಶಿಸಿತು. [8]ದಾವೀದನು ದೇವಾಲಯಕ್ಕೆ ಸಿದ್ಧತೆಗಳನ್ನು ಮಾಡಿದಾಗ ಆತನು ಕೆಲ ಲೇವಿಗಳನ್ನು (ಯಾಜಕರನ್ನು) "ದ್ವಾರಪಾಲಕರನಾಗಿ" ನೇಮಿಸಿದನು (1 ಪೂರ್ವಕಾಲವೃತ್ತಾಂತ 26:1-19). ಇದು ಕೇವಲ ಬಾಗಿಲು ತೆಗೆಯುವವರು ಹಾಕುವವರು ಎಂದರ್ಥವನ್ನು ಕೊಡುವುದಿಲ್ಲ. ಬದಲಾಗಿ, ಅವರು ದೇವಾಲಯವನ್ನು ಕಾಯುವವರಾಗಿದ್ದರು. ಅವರು ದೇವಾಲಯದ ಶಾಂತತೆ ಮತ್ತು ಪೂಜ್ಯಭಾವನೆಯ ವಾತಾವರಣವನ್ನು ಕಾಪಾಡಿಕೊಳ್ಳುವವರಾಗಿದ್ದರು. ಕಪ್ತಾನನು (ನೌಕೆಯ ನಾಯಕ) ಈ "ದ್ವಾರಪಾಲಕರ" ಮೇಲಿನ ಯಾಜಕನಾಗಿದ್ದನು. ದಿನಂಪ್ರತಿಯ ಶಿಸ್ತನ್ನು ಕಾಪಾಡಿಕೊಳ್ಳುವ ಜವಾ ಬ್ದಾರಿ ಅವರಿಗಿತ್ತು. ಲೂಕ 22:4, 52. "ದೇವಾಲಯದ ಕಪ್ತಾನರ" [ಬಹುವಚನ] ಬಗೆಗೆ ಮಾತನಾಡುತ್ತದೆ (KJV; ಅದೇ ರೀತಿಯ ಗ್ರೀಕ ಪದವು ಲೂಕ 22:4, 52ರಂತೆ ಅಪೊಸ್ತಲರ ಕೃತ್ಯಗಳು 4:1ರಲ್ಲಿ ಬಳಿಕೆಯಾಗಿದೆ), ಅವರು ತಮ್ಮ ನಿರ್ಧಿಷ್ಟ ಕಾಲಾವಧಿಯಲ್ಲಿ ಕೆಲಸಮಾಡುವವರು ಎಂದು ಸೂಚಿಸುವುದಾಗಿದೆ. ದೇವಾಲಯದ ಬೇರೆ ಬೇರೆ ಕರ್ತವ್ಯಗಳನ್ನು ನಿಭಾಯಿಸುವಂತೆ ಈ ಕರ್ತವ್ಯವು ಬೇರೆಯವರೆಲ್ಲಗೂ ರವಾನಿಸಲ್ಪಡುತ್ತಿತ್ತು. ತಿರುಗಿ ರಾಜಕೀಯವು ರಾಜಕೀಯವು ಈ ನೇಮಕಾತಿಯಲ್ಲಿ ಪ್ರವೇಶಿಸಿತು. [9]ಪದಕೋಶದಲ್ಲಿ "ಸದ್ದುಕಾಯರು" ಎಂಬುದನ್ನು ನೋಡಿರಿ. ಶಿಷ್ಯರಿಗೆ ವಿರೋಧ ವ್ಯಕ್ತಪಡಿಸುವುದನ್ನು ಆರಂಭಿಸಿದವರು ಸದ್ದುಕಾಯರೇ ಹೊರತಾಗಿ ಫರಿಸಾಯರಲ್ಲ ಎಂಬುದು ಆಶ್ಚರ್ಯಕರವಾದ ಸಂಗತಿಯಾಗಿದೆ. ಯೇಸುವಿನ ಅನೇಕ ವಾಗ್ವಾದಗಳ ತಿಕ್ಕಾಟವು ಫರಿಸಾಯರೊ ಂದಿಗಿದ್ದವೇ ಹೊರತು ಸದ್ದುಕಾಯರೊಂದಿಗಿದ್ದಿಲ್ಲ ಎಂಬುದನ್ನು ಗಮನಿಸಬೇಕು. ಹೇಗೋ, ಅಪೊಸ್ತಲರ ಪ್ರಾರಂಭದ ಬೋಧನೆಯಲ್ಲಿ ಪುನರುತ್ಥಾನದ ವಿಷಯವು ಕೇಂದ್ರೀಕೃತವಾಗಿತ್ತು, ಪರಿಸಾಯರು ಸತ್ತವರಿಗೆ ಪುನರುತ್ಥಾನವುಂಟೆಂದು ನಂಬಿಕೆ ಇಡುವವರಾಗಿದ್ದರು ಆದರೆ ಸದ್ದುಕಾಯರಿಗೆ ನಂಬಿಕೆಯಿರಲಿಲ್ಲ (23:6-8). ಆದ್ದರಿಂದ ಸಹಜವಾಗಿ ಸದ್ದುಕಾಯರು ಈ ವಿಷಯದಲ್ಲಿ ಗಲಿಬಿಲಿಗೊಳಗಾದರು. [10]ಯೇಸು ಹೊಂದಿದಂತೆ ಅದೇ ರೀತಿಯ ಬೆದರಿಕೆಯನ್ನು ಅವರೂ ಸಹ ಹೊಂದಿದರು (ಗಮನಿಸಿ ಯೋಹಾನ 11:45-53).

[11]"ದೇವರು ಸತ್ತವರೊಳಗಿಂದ ಎಬ್ಬಿಸಿದ ಯೇಸುವೇ ಆತನು" (3:15) ಎಂದು ಅಪೊಸ್ತಲರು ಪುನರುತ್ಥಾನದ ಬಗೆಗೆ ಮಾತನಾಡುತ್ತಿರುವಾಗ ಅವರ ಮಾತುಗಳು ಸಾಮಾನ್ಯವಾಗಿ ವೈಯಕ್ತಿಕವೂ ಮತ್ತು ನಿರ್ಧಿಷ್ಟವೂ ಆಗಿದ್ದವು. ವೈಯಕ್ತಿಕವಲ್ಲದವುಗಳೂ ಮತ್ತು ಸಾಮಾನ್ಯ ಮಾತುಗಳಾದ "ಮರಣದಿಂದ ಪುನರುತ್ಥಾನ" ಎಂಬುದು ಅನೇಕ ಭಾಷಾಂತರಕಾರರನ್ನು ಮತ್ತು ಭಾಷ್ಯಕಾರರನ್ನೂ ಯೇಸುವಿನ ದೈಹಿಕ ಪುನರುತ್ಥಾನದಿಂದ ಸಾಮಾನ್ಯವಾದ ದೈಹಿಕ ಪುನರುತ್ಥಾನದ ವಾಗ್ದಾನದ ಸಾಮಿಪ್ಯತೆಯತ್ತ ನಡೆಸುತ್ತದೆ ಎಂಬ ತೀರ್ಮಾನಕ್ಕೆ ಬರುತ್ತಾರೆ (1 ಕೊರಿಂಥ 15:20-29) ಜನರು


ಯೇಸುವಿನ ಶಕ್ತಿಯ ಮೂಲಕ ಸತ್ತವರೊಳಗಿಂದ ಎದ್ದುಬರುವರು ಎಂಬುದು ಹೊಸ ಶತಮಾನದ ಭಾಷಾಂತರವು ಬೋಧಿಸುತ್ತದೆ. C. H. Rieu ರವರ ಅಪೊಸ್ತಲರ ಭಾಷಾಂತರದಲ್ಲಿ ಪುನರುತ್ಥಾನದ ಬೋಧನೆಯಾಗಿ "ಸತ್ತವರೊಳಗಿಂದ ಪುನರುತ್ಥಾನವು ಎಂದು ಯೇಸುವಿನ ಪ್ರಕರಣವನ್ನು ಉದಾಹರಿಸುತ್ತ ಸಾಬೀತುಮಾಡುವುದು" ಎಂಬುದಾಗಿದೆ. [12]ಅವರು ಆತನು (ಯೇಸು) ಮರಣ ಹೊಂದುವ ಪೂರ್ವದಲ್ಲಿ ಆತನೊಡನೆ (ಯೇಸುವಿನೊಡನೆ) ಈ ವಿಷಯ ಕುರಿತು ವಾಗ್ವಾದ ಮಾಡಿದರು (ಮತ್ತಾಯ 22:23-33). [13]ಅಮೇರಿಕದಲ್ಲಿ ವಾಸಮಾಡುವ ನಾವು "ಬೈಬಲ್ ಬೆಲ್ಟ್‌ನ" ಛಾವಣಿಯಲ್ಲಿ ಸುರಕ್ಷಿತ ಜೀವನವನ್ನು ಹೊಂದಿದ್ದೇವೆ. ಕೇಲವರು ದೇವರ ವಾಕ್ಯವನ್ನು ಟೀಕಿಸುವುದನ್ನು ಎಂದಿಗೂ ಕೇಳಿಲ್ಲ. ಇನ್ನೊಂದು ಜಾಗತಿಕ ಸತ್ಯಾಂಶವಲ್ಲ ಹೊರತಾಗಿ ಜಾಗತಿಕವಾಗಿ ನಡೆಯುವುದೂ ಅಲ್ಲ. [14]ಇದು ದೇವಾಲಯದ ವ್ಯಾಪ್ತಿಯಲ್ಲಿರುವ ಒಂದು ಕೋಣೆಯಾಗಿರುವ ಸಾಧ್ಯತೆಯು ಇದೆ. [15]ಪೇತ್ರನ ಬೋಧನೆಯು ಮಧ್ಯಾಹ್ನ 3.00ಘಂಟೆಯ ನಂತರ ಆರಂಭವಾಯಿತು; ಮತ್ತು ಹೆಚ್ಚೂಕಡಿಮೆ ಸಂಜೆಯ ಸಮಯದಲ್ಲಿ ಅದಕ್ಕೆ ಅಡ್ಡಿಪಡಿಸಲಾಯಿತು (ಸಂಜೆ ಸುಮಾರು 6ಘಂಟೆಗೆ). ಅಪೊಸ್ತಲರ ಕೃತ್ಯದಲ್ಲಿನ ಬೋಧನೆಗೆ ಸಂಕ್ಷಿಪ್ತ ರೀತಿಯಲ್ಲಿ ಇನ್ನೊಂದು ಆಧಾರವನ್ನು ಲೂಕನು ಕೊಡುತ್ತಾನೆ. [16]ಯೆರೆಮೀಯ 21:12ರಲ್ಲಿ ಹೇಳುವುದೇನಂದರೆ ನ್ಯಾಯವು "ಪ್ರತಿಮುಂಜಾನೆ" ಆಳುತ್ತಿರುವಂತದ್ದಾಗಿದೆ. ಯೆಹೂದಿಗಳು ಒಂದು ನಿಯಮವನ್ನು ಮಾಡಿಕೊಂಡಿದ್ದರು. ಅದೇನಂದರೆ ಜೀವನ ಮರಣಕ್ಕೆ ಸಂಬಂಧಿಸಿದಂತಹ ಯಾವುದೇ ಸಂಗತಿಗಳನ್ನು ರಾತ್ರಿ ಸಮಯದಲ್ಲಿ ಪ್ರಯತ್ನಿಸಬಾರದು ಎಂದು. ಆದರೆ ಯೇಸುವಿನ ವಿಷಯದಲ್ಲಿ ಆ ನಿಯಮವನ್ನು ಬಿಟ್ಟುಬಿಟ್ಟರು. (ಅವರು ತಮ್ಮ ಉದ್ದೇಶಗಳು ಅವರು ಮಾಡುವ ಕಾರ್ಯಗಳಿಗೆ ಹೊಂದಾಣಿಕೆ ಆಗುವಂತಿದ್ದಾಗ ಮಾತ್ರ ನಿಯಮಗಳನ್ನು ಅನುಸರಿಸುತ್ತಿದ್ದರು). [17]"ಕೈಯನ್ನು ಎತ್ತು" ಎಂಬುದರ ಅರ್ಥ "ಹೊರಡಲು ಸಿದ್ಧನಾಗು." [18]"ನಂಬಿಕೆ" ಇದನ್ನು ವ್ಯಾಪಾಕಾರ್ಥದಲ್ಲಿ ನಾವು ಬಳಸಿದಾಗ ಅಂತರ ಬದಲಾವಣೆಯೊಂದಿಗೆ "ವಿಧೇಯತೆ" ಎಂದೂ ಬಳಸಲ್ಪಡಬಹುದು. ಉದಾಹರಣೆಗೆ ಯೋಹಾನ 3:36ಕ ಪ್ರಕಾರ ಓದುವುದೇನೆಂದರೆ; ಆತನ ಮಗನಲ್ಲಿ ಯಾರು ನಂಬಿಕೆಯಿಟ್ಟರೋ ಅವರು ನಿತ್ಯಜೀವವನ್ನು ಹೊಂದುವರು; ಆದರೆಆತನ ಮಗನಿಗೆ ವಿಧೇಯರಾಗುವದಿಲ್ಲವೋ ಜೀವವನ್ನು ಹೊಂದುವುದಿಲ್ಲ, ಆದರೆ ಆತನ ಮೇಲೆ ದೇವರ ಕೋಪವು ನೆಲೆಗೊಳ್ಳುವದು. (ಒತ್ತಿ ಹೇಳಿದ್ದು ನನ್ನದು) ಇಲ್ಲಿ ಎರಡು ಭಿನ್ನವಾದ ಗ್ರೀಕ ಪದವನ್ನು ಬಳಸಲಾಗಿದೆ. KJVಯು ಕೂಡ ಇದನ್ನು ಸೂಚಿಸುವುದಿಲ್ಲ. [19]ನಾನು ಇದನ್ನು "ಪರಿವರ್ತನೆಯ ಸೇತುವೆ" ಎಂದು ಕರೆಯುತ್ತೇನೆ. ಇದರ ಕುರಿತು ನಾನು ನಂತರ ಇದರಲ್ಲಿ ಹೆಚ್ಚಿನದನ್ನು ನಂತರದಲ್ಲಿ ಹೇಳುತ್ತೇನೆ. [20]ಬೆರ್ನಾರ್ಡ್ ಆರ್. ಯಂಗಮ್ಯಾನ್, ಸುವಾರ್ತೆಯನ್ನು ಹರಡುವದು (ಲಂಡನ, ಹಲ್ಟನ ಎಜುಕೇ ಷನಲ್ ಪಬ್ಲಿಕೇಶನ್, 1968), 18.

[21]ನಾವು ಈ ಪಾಠವು ಸಂಕ್ಷಿಪ್ತ ಆವೃತ್ತಿಯನ್ನು ಹೊಂದಿದ್ದರಿಂದ, ಪೇತ್ರನು ಅವರಿಗೆ ದೀಕ್ಷಾಸ್ನಾನ ಮಾಡಿಸಿಕೊಳ್ಳಲು ಹೇಳಿರುವ ಸಾಧ್ಯತೆಯು ಇದೆ. ಆದರೆ ದಾಖಲಾದ ಬೋಧನೆಯ ಪ್ರಕಾರ ಆತನು ಹಾಗೆ ಮಾಡಲಿಲ್ಲ ಎಂದಾಗಿದೆ. [22]ಇನ್ನೊಂದು ಮಾತಿನಲ್ಲಿ "ಅಂತ್ರಾಪ್ಸ" ಎಂದಿದೆ. ಇದು "ಮನುಕುಲ" ಎಂಬ ಅರ್ಥವನ್ನು ಕೊಡಬಹುದು. [23]ಪೇತ್ರನ ಮೊದಲ ಪ್ರಸಂಗವು 3000 ಸಾವಿರ ಜನರ ದೀಕ್ಷಾಸ್ನಾನದ ಪರಿಣಾಮವನ್ನು ಉಂಟುಮಾಡಿತು ಹಾಗೂ ಪೇತ್ರನ ಎರಡನೆಯ ಪ್ರಸಂಗವು ಎರಡು ಸಾವಿರಕ್ಕೂಹೆಚ್ಚಿನ ಪರಿಣಾಮವನ್ನು ಉಂಟುಮಾಡಿತು ಎಂದು ಹೇಳಲಾರೆನು. 2:41ರಲ್ಲಿನ 3000 ಜನರಲ್ಲಿ ಸ್ತ್ರೀಪುರುಷರು ಒಳಗೊಂಡಿರಬಹುದು ಮತ್ತು 5000 ಜನರು ಕೇವಲ ಗಂಡಸರಾಗಿದ್ದರು, ಹೆಚ್ಚಿನವರು ಬಹುಶಃ 2000ಕ್ಕೂ ಹೆಚ್ಚಿದ್ದರು. ಪೇತ್ರನ ದಾಖಲಾದ ಎರಡನೆಯ ಬೋಧನೆಯ ಪರಿಣಾಮದ ಎಷ್ಟು ಜನ ನಿಶ್ಚಯವಾಗಿ ದೀಕ್ಷಾಸ್ನಾನ ಮಾಡಿಸಿಕೊಂಡರು ಎಂದು ನಿಖರವಾಗಿ ಹೇಳಲು ಸಾಧ್ಯವಿಲ್ಲ. ಆದರೆ ಲೂಕನ ಹೇಳಿಕೆಯ, ಖಂಡಿತವಾದ ವಿಚಾರವೆಂದರೆ, ಯೆಹೂದಿ ನಾಯಕರುಗಳ ಕಾರ್ಯದ ಪ್ರಯುಕ್ತವಾಗಿ, ಪೇತ್ರನ ಬೋಧನೆಯು ಇನ್ನೂ ಶಕ್ತಿಯುತವೂ ಪರಿಣಾಮಕಾರಿಯೂ ಆಗಿತ್ತು ಮತ್ತು ಅನೇಕರನ್ನು ಕ್ರೈಸ್ತರನ್ನಾಗಿಸುವ ಪರಿಣಾಮವನ್ನು ತಂದಿತು. ಈ ವಿಷಯವನ್ನು ಕುರಿತು ನಾವು ಸಂತೃಪ್ತಿಪಟ್ಟುಕೊಳ್ಳಬೇಕಾಗಿದೆ. [24]ಇಂದು ಅನೇಕ ಚರ್ಚುಗಳಲ್ಲಿ, ಸ್ತ್ರೀಯರು ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ ನಾವು ಒಟ್ಟು ಸಂಖ್ಯೆಯನ್ನು 15,000-20,000 ಎಂದು ಹೇಳಬಹುದು. ಇದು ಹೇಗೋ, ಆದಿ ಸಭೆಯ ಚರಿತ್ರೆಯಲ್ಲಿ ನಡೆದದು. ಸಾವಿರಾರು ವರ್ಷಗಳ ಪುರುಷರ ಮೇಲುಗೈಯು ಹತ್ತಿಕಲ್ಪಡಬೇಕು. ಅನೇಕ ಸ್ತ್ರೀಯರು ತಮ್ಮ ಗಂಡಂದಿರು ಕ್ರೈಸ್ತರಾಗುವುದಕ್ಕಿಂತ ಮುಂಚೆ ಕ್ರೈಸ್ತರಾಗುವ ಸಾಧ್ಯತೆಗಳು ಅತಿ ವಿರಳ ವಾಗಿದ್ದವು. ಸಮಯವು ಸರಿದಂತೆ ಇದು ಬದಲಾಯಿತು (1 ಪೇತ್ರ 3:1, 2). [25]"ಶಾಸ್ತ್ರಿಗಳು" ಇದು NIVಯಲ್ಲಿ "ನಿಯಮಗಳನ್ನು ಬೋಧಿಸುವ ಶಿಕ್ಷಕರು" ಎಂದಿದೆ. [26]ಗ್ರೀಕ ಪದದ ಭಾಷಾಂತರವಾದ "ನ್ಯಾಯ ಮಂಡಳಿ" 4:15ರಲ್ಲಿ ಸನ್ಹೆದ್ರೀನ್ ಎಂಬುದಾಗಿದೆ. NIVಯಲ್ಲಿ ಭಾಷಾಂತರವಾದ ಪದ ಸನ್ಹೆದ್ರೀನ ಎಂದಾಗಿದೆ. ನೋಡಿ ಪದಕೋಶದಲ್ಲಿ

"ಸನ್ಹೆದ್ರೀನ್." [27]USನಲ್ಲಿ ಸಭೆ ಮತ್ತು ಉಚ್ಚನ್ಯಾಯಾಲಯಗಳು ಶಾಸಕಾಂಗ ಮತ್ತು ನ್ಯಾಯಂಗಗಳ ಭಾಗಗಳು ಸರಕಾರದ ಶಾಖೆಗಳಾಗಿದ್ದು ನಿಮ್ಮ ದೇಶದ ಭಾಷೆಯಲ್ಲಿ ಯಾವ ಪಾರಿಭಾಷೆಯನ್ನಾದರೂ ಬಳಸಬಹುದು. [28]ಇದು ಹೇಗೆಂದರೆ ಒಬ್ಬರನ್ನು ಅಧ್ಯಕ್ಷಸ್ಥಾನದಲ್ಲಿ ಇರದಿರುವಾಗಲೂ ಆತನನ್ನು ಅಧ್ಯಕ್ಷ ಎಂದು ಕರೆಯುವಂತದು ಅಥವಾ ನಿವೃತ್ತಿ ಹೊಂದಿದ ಮಿಲಟರಿ ಅಧಿಕಾರಿಗೆ "ಮಿಲಟರಿ ಅಧಿಕಾರಿ" ಎಂದು ಕರೆಯುವದು ರೂಢಿಯಲ್ಲಿರುವಂತದ್ದು ಆಗಿದೆ. [29]ಲೂಕ 3:2ನ್ನು ಗಮನಿಸಿರಿ. ಈ ಮನುಷ್ಯನು ಹೊಂದಿಕೊಂಡ ಅಧಿಕಾರವು ಯೇಸು ಸೆರೆ ಹಿಡಿಯಲ್ಪಟ್ಟಾಗ ತೋರಿಬಂತು, "ಅವರು" ಮೊದಲು ಅನ್ನನ ಹತ್ತಿರ ಹೋದರು (ಯೋಹಾನ 18:13). [30]ಯೋಹಾನನ ಬದಲಾಗಿ "ಯೋನಾತಾನ" ಎಂಬುದಾಗಿ ಕೆಲ ಪುರಾತನ ಹಸ್ತಪ್ರತಿಗಳಲ್ಲಿ ಇದೆ. ಯೋನಾತಾನನು ಅನ್ನನ ಮಗನಾಗಿದ್ದನು; ನಂತರ ಆತನು ಮಹಾಯಾಜಕನಾಗಿ ಸೇವೆ ಮಾಡುತ್ತಿದ್ದನು.

[31]ಅಪೊಸ್ತಲರ ಸಮಯದಲ್ಲಿ ಯೆಹೂದಿಯರ ಯಾಜಕವರ್ಗವು ಸಂಪೂರ್ಣ ಭ್ರಷ್ಟಾಚಾರದಿಂದ ನರಳುತ್ತಿತ್ತು. ಮಹಾಯಾಜಕನ ಹುದ್ದೆಯನ್ನು ಧರ್ಮಶಾಸ್ತ್ರದಲ್ಲಿ ಪ್ರಾವಿಣ್ಯತೆಯಿಂದ ನೇಮಿಸುವುದರ ಬದಲಾಗಿ, ಸ್ಥಾನವು ಅಧಿಕಾರದ ಮೂಲದಿಂದ ಸಿಗುವುದರಿಂದ ಮಹಾಯಾಜಕರು ನೇಮಕಗೊಳ್ಳುತ್ತಿದ್ದರು ಮತ್ತು ಹೊರದಬ್ಬಲ್ಪಡುತ್ತಿದ್ದರು. ಹೆಚ್ಚಿನ ಮಹಾಯಾಜಕರ ಉತ್ತಾರಾಧಿಕಾರಿಗಳು ಕೆಲವೇ ಕುಟುಂಬಗಳಿಂದ ಆಯ್ಕೆಯಾಗುತ್ತಿದ್ದವು. ಅಧಿಕಾರಿಯುಕ್ತವಾಗಿ ಮತ್ತು ಪ್ರಭಾವಿ ಕುಟುಂಬಗಳು ಮಹಾಯಾಜಕ ಕುಟುಂಬದ ವಂಶಸ್ಥರೇ ಆಗಿರುತ್ತಿದ್ದರು. [32]ಸಾಂಪ್ರದಾಯಿಕವಾಗಿ, ಸನ್ಹೆದ್ರೀನನಲ್ಲಿ ಎಪ್ಪತ್ತು ಜನ ಸದಸ್ಯರಿದ್ದರು ಹಾಗೂ ಅದರೊಡನೆ ಯಾಜಕರೂ ಸೇರಿರುತ್ತಿದ್ದರು. [33]ಮಹಾಯಾಜಕ ಕುಟುಂಬಗಳಿಂದ "ಎಲ್ಲರೂ" ಉಪಸ್ಥಿತರಿದ್ದರು ಎಂಬುದನ್ನು ನೆನಪಿಡಬೇಕು, ನ್ಯಾಯಧಿಪತಿಗಳು ಸುತ್ತಲಿರುವ ಜನರು ಮುಖ್ಯವಾಗಿ ಯೌವನಸ್ಥರು ಆಗಿದ್ದು "ಸಲಹಾ ಸಮಿತಿಯ" ರೀತಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದರು. ಇವರು "ತರಬೇತಿಗೊಳ್ಳುತ್ತಿರುವ ನ್ಯಾಯಧೀಶರಾಗಿರುತ್ತಿದ್ದರು." [34]ವಚನ 14 ಬಹುಶ ಆತನಿಗೆ ಅಂಗಳದಲ್ಲಿ ಕಾಣಿಸಿಕೊಳ್ಳದಂತೆ ಅಪ್ಪಣೆ ಕೊಡಲಾಗಿತ್ತು, ಆದರೆ ಇದು ಅಸಂಭವನೀಯವಾಗಿ ಕಂಡುಬರುತ್ತದೆ. ಬಹುಶ ಇದು ಸಾರ್ವಜನಿಕೆ ನ್ಯಾಯ ಕೇಳುವ ಸ್ಥಳವಾಗಿದ್ದು ಯಾರಾದರು ಬರಬಹುದಾಗಿತ್ತು. ಮತ್ತು ಆತನು ತನ್ನನ್ನು ಸ್ವಸ್ಥಮಾಡಿದವರೊಡನೆ ಬಂದನು. ಆತನು ಪ್ರತ್ಯೇಕವಾಗಿ ಪ್ರಶ್ನಿಸಲು ಬಹುಶ ಒತ್ತಾಯಿಸಲ್ಪಟ್ಟಿರಬೇಕು. ಯಾವ ವಿವರಗಳೂ ಸಂಪೂರ್ಣ ವಾಗಿ ಸಂತೃಪ್ತಿದಾಯಕವಾಗಿರಲಿಲ್ಲ ಮತ್ತು ಲೂಕನು ಇದನ್ನು ನಮಗೆ ಹೇಳುವದು ಅವಶ್ಯ ಎಂದು ಯೋಚಿಸಿರಲಿಕ್ಕಿಲ್ಲ. ಒಂದು ಗುರುತರ ಸಂಗತಿಯು ಏನೆಂದರೆ ನ್ಯಾಯಾಲಯದ ಸಂದಿಗ್ಧ ಪರಿಸ್ಥಿತಿಯಲ್ಲಿ ಇದ್ದಾಗಲೂ ಆತನು ಅಲ್ಲಿದ್ದನು (ವಚನ 14). [35]ಸದ್ದುಕಾಯರು "ಬಹುವಾಗಿ ಗಲಿಬಿಲಿಗೊಳಗಾದರು ಯಾಕೆಂದರೆ ಅವರು ... ಯೇಸುವು ಸತ್ತವರೊಳಗಿಂದ ಎದ್ದುದ್ದನ್ನು ಘೋಷಿಸದ್ದರಿಂದಲೇ" (ವಚನಗಳು 1, 2). ಆದರೆ ಅವರು ಪೇತ್ರ ಮತ್ತು ಯೋಹಾನರು ತಪ್ಪಾದ ಬೋಧನೆಯನ್ನು ಮಾಡುತ್ತದ್ದಾರೆ ಎಂದು ಆರೋಪವನ್ನು ಮಾಡುತ್ತಿರಲಿಲ್ಲ, ಪರಿಸಾಯರು ದೇಹದ ಪುನರುತ್ಥಾನವನ್ನು ನಂಬುತ್ತಿದ್ದರು ಮತ್ತು ಕೆಲ ಅಧಿಕಾರಿಯುಕ್ತ ಫರಿಸಾಯರು ಸನ್ಹೆದ್ರೀನನ ಸದಸ್ಯರಾಗಿದ್ದರು (ಗಮನಿಸಿ 5:34). [36]ಕೊನೆಯ 2 ಸಾಲುಗಳು ರಿಚರ್ಡ ರೋಗರ್ಸ್‌ರಿಂದ ಮೊದಲ ವಿರೋಧ ಎಂಬ ಪುಸ್ತಕದಿಂದ ಪಡೆದವುಗಳಾಗಿವೆ. Sermon preached at the Sunset church of Christ, Lubbock, Texas, n.d. [37]ಅಪೊಸ್ತಲರ ಕೃತ್ಯಗಳು 2:22ರಲ್ಲಿ ಮೊದಲು ಕಾಣಸಿಗುವ ಟಿಪ್ಪಣೆಯಲ್ಲಿನ "ಅದ್ಭುತಗಳು" ಎಂಬ ಪದದ ಭಾಷ್ಯವನ್ನು ನೋಡಿರಿ. [38]ಇದು ಅನೇಕ ಜಾಷಾಂತರಕಾರಿಂದ ಜೇಮ್ಸ ಮೊಫೆತ್, ಚಾರ್ಲ್ಸ್ ಬಿ. ವಿಲಿಯಮ್ಸ್, ಸಿಎಚ್. ರೈ ಮತ್ತು ಎಡ್ಗರ್ ಜೆ, ಗುಡಸ್ಪೀಡ್ ಈ ಭಾಷಾಂತರಕಾರರಿಂದ ಎರವಲು ತೆಗೆದುಕೊಂಡದ್ದಾಗಿದೆ. ಹಿಂದಿನ ಪಾಠದ ಆರಂಬದ ಹೆಸರಿನ ಪರಿಕಲ್ಪನೆಯ ಮೇಲಿನ ಚರ್ಚೆಯನ್ನು ನೋಡಿರಿ. [39]Kenneth N. Taylor, in the Living Bible. [40]Jimmy Allen, *Survey of Acts* (Searcy, Ark.: Jimmy Allen, 1986), 51.

[41]Rogers.


ಅಂಥೋನಿಯನ
ಕೋಟೆ
ದೇವಾಲಯ
ಇಸ್ರಾಯೇಲ್ಯರ
ನ್ಯಾಯಸ್ಥಾನ
ಯಾಜಕರ
ನ್ಯಾಯಸ್ಥಾನ
ಬಲಪೀಠ
ಸುಂದರ
ದ್ವಾರ
ಸ್ತ್ರೀಯರ
ನ್ಯಾಯಸ್ಥಾನ
ತಾಮ್ರದ ಪೀಠ
ಅತಿ
ಪರಿಶುದ್ಧ
ಸ್ಥಳ
ಪರಿಶುದ್ಧ
ಸ್ಥಳ
ಸೊಲೊಮೋನನ
ದ್ವಾರಪಾಲಕ
ಅನ್ಯಜನರ
ನ್ಯಾಯಸ್ಥಾನ

*ದೇವಾಲಯದ ಚಿತ್ರ ಪಟ*